ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 12 | ಮಾರ್ಚ್ 22, 1981 | ಬೆಲೆ : 50 ಪೈಸೆ

ಶೋಷಕರ ಮುಂಗಡಪತ್ರ

ತಾ. 18-3-81ರಂದು ಆರ್ಥಿಕ ಸಚಿವರಾದ ಶ್ರೀ ವೀರಪ್ಪಮೊಯ್ಲಿಯವರು 81-82ನೇ ಸಾಲಿನ ಮುಂಗಡಪತ್ರವನ್ನು ಶಾಸನ ಸದನದ ಮುಂದೆ ಮಂಡಿಸಿದರು. ಇದೊಂದು "ನಿರಾಶಾದಾಯಕ" ಮುಂಗಡಪತ್ರವೆಂಬುದಾಗಿ ವಿರೋಧ ಪಕ್ಷಗಳ ನಾಯಕರು ಹೇಳಿ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಇದು ನಿಜವಾಗಿಯೂ ರಾಜ್ಯದ ಜನತೆಗೆ ನಿರಾಶೆಯನ್ನುಂಟುಮಾಡುವ ಮುಂಗಡಪತ್ರವೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಸರಕಾರವು ಕೆಲವೊಂದು ಸಾಮಗ್ರಿಗಳ ಮೇಲಿನ ತೆರಿಗೆಯನ್ನು ಹೆಚ್ಚಿಸಿದೆ. ಹೋಟೇಲನ್ನೇ ಅವಲಂಬಿಸಿರುವವರ ಪರಿಸ್ಥಿತಿ ತುಂಬಾ ಶೋಚನೀಯವಾಗಲಿದೆ. ಇದನ್ನು ಅನೇಕ ಪತ್ರಿಕೆಗಳು ಟೀಕೆಮಾಡಿವೆ. ಹಾಗೆನೇ ಇನ್ನಿತರ ಹಲವಾರು ಹೊಸ ತೆರಿಗೆಗಳನ್ನು ಸೂಚಿಸಲಾಗಿದೆ. ಇದೆಲ್ಲದರ ಪರಿಣಾಮವಾಗಿಯೂ, ಕೇಂದ್ರಸರಕಾರದ ಹೊಸ ತೆರಿಗೆಗಳ ಪರಿಣಾಮವಾಗಿಯೂ ಹಣದುಬ್ಬರ, ಬೆಲೆಏರಿಕೆ ಮುಂತಾದುವು ಇನ್ನೂ ಹೆಚ್ಚಾಗಿ ಸಾಮಾನ್ಯ ಜನತೆಯ ಶೋಷಣೆಗೆ ಅವಕಾಶ ಕಲ್ಪಿಸಿಕೊಡುತ್ತವೆ.

ಒಟ್ಟಿನಲ್ಲಿ ರಾಜ್ಯದ ಕೈಗಾರಿಕಾ ಪ್ರಗತಿಗಾಗಲಿ, ವ್ಯವಸಾಯ ಪ್ರಗತಿಗಾಗಲಿ ಯೋಜನೆಗಳು ಇದರಲ್ಲಿಲ್ಲ. ಭೂಸುಧಾರಣೆಯು ಕುಂಟುತ್ತಾ ನಡೆಯುತ್ತಿದೆ. ಕಳೆದೆರಡು ವರ್ಷಗಳಲ್ಲಿ ಪಶ್ಚಿಮ ಬಂಗಾಳ ಸರಕಾರ ಭೂಸುಧಾರಣೆಯಲ್ಲಿ ಗಳಿಸಿದ ಸಾಧನೆಯ ಒಂದಂಶವನ್ನೂ ಈ ಸರಕಾರ ಒಂದು ದಶಕದಲ್ಲೂ ಮಾಡಿಲ್ಲ. ನೀರಾವರಿಯ ಪ್ರಗತಿಯೂ ಹಿಂದೆ

ಸಂಪಾದಕೀಯ

ಬಿದ್ದಿದೆ. ಕೈಗಾರಿಕೆಗಳಿಗೆ ಪ್ರೋತ್ಸಾಹ ಕಡಿಮೆಯಾಗಿರುವುದರಿಂದ ಉದ್ಯೋಗಾವಕಾಶಗಳು ಕಡಿಮೆಯಾಗಿ ನಿರುದ್ಯೋಗ ಸಮಸ್ಯೆಯು ತೀವ್ರವಾಗುತ್ತಿದೆ.

ಜನತೆಯ ಕಲ್ಯಾಣಕ್ಕೆ ಹೊಸ ಯಾವ ಯೋಜನೆಯನ್ನೂ ರೂಪಿಸಿಲ್ಲ. ಜನತಾ ಗೃಹ ನಿರ್ಮಾಣ ಯೋಜನೆಯು ವಿಫಲಗೊಂಡಿರುವುದರ ಬಗ್ಗೆ ಈಗಾಗಲೇ ಪತ್ರಿಕೆಗಳಲ್ಲಿ ಬಂದಿದೆ. ಜನರಿಗೆ ಉದ್ಯೋಗವಿಲ್ಲ. ವಾಸಕ್ಕೆ ಮನೆಗಳಿಲ್ಲ. ವಿದ್ಯಾಭ್ಯಾಸಕ್ಕೆ ಸ್ಕೂಲ್‌ಗಳಿಲ್ಲ. ಔಷದೋಪಚಾರಕ್ಕೆ ಆಸ್ಪತ್ರೆಗಳಿಲ್ಲ. ಕುಡಿಯುವ ನೀರಿನ ಸೌಲಭ್ಯವೂ ಸಹಸ್ರಾರು ಗ್ರಾಮಗಳಿಗಿಲ್ಲ. ಹೀಗಾಗಿ ಈ ಮುಂಗಡಪತ್ರದಲ್ಲಿ ಸಾಮಾನ್ಯ ಜನತೆಯ ಆಶೋತ್ತರಗಳನ್ನು ಈಡೇರಿಸುವ ಯಾವ ಕ್ರಮಗಳೂ ಬಂದಿಲ್ಲ.

ಕಳೆದೊಂದು ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ಅದ್ಭುತ ರೈತರ, ಕಾರ್ಮಿಕರ, ವಿದ್ಯಾರ್ಥಿಗಳ ಹೋರಾಟಗಳು ನಡೆದಿವೆ. ಈ ಎಲ್ಲ ವಿಭಾಗದವರಿಗೆ ಈ ಮುಂಗಡಪತ್ರವು ಯಾವ ಭರವಸೆಯನ್ನೂ ಕೊಟ್ಟಿಲ್ಲ. ಯಾವ ಬೇಡಿಕೆಯನ್ನೂ ಈಡೇರಿಸಿಲ್ಲ. ಸರಕಾರದ ಒಟ್ಟು ಧೋರಣೆಯ ಪರಿಣಾಮವಾಗಿ ಜನತೆಯು ಹೆಚ್ಚಿನ ಹೊರೆಯನ್ನು ಹೊರಬೇಕಾಗಿದೆ. ಈ ಪ್ರತಿಗಾಮಿ ಧೋರಣೆಯನ್ನೆದುರಿಸಲು ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಪಾರ್ಟಿಗಳೂ, ಶಕ್ತಿಗಳೂ ತಮ್ಮ ಸಂಯುಕ್ತ ಹೋರಾಟವನ್ನು ಮುಂದುವರಿಸಬೇಕಾದ್ದು ಬಹಳ ಅಗತ್ಯ. ಮುಂದಿನ ಸಾಲಿನಲ್ಲಿ ಹೆಚ್ಚು ತೀವ್ರ ಹೋರಾಟಗಳು ನಡೆಯುವುದು ಅನಿವಾರ್ಯ. ●

ವ್ಯಾಪಕಗೊಳ್ಳುತ್ತಿರುವ ಹಿಂಸಾಚಾರ

ಒಂದು ವರ್ಷ ಎರಡು ತಿಂಗಳ ಹಿಂದೆ ಪಕ್ಷಾಂತರಿಗಳ ಬೆಂಬಲದಿಂದ ಅಧಿಕಾರಕ್ಕೆ ಬಂದ ಗುಂಡೂರಾಯರ ಸರಕಾರ ಜನತೆಯ ಸಮಸ್ಯೆಗಳನ್ನು ಬಗೆಹರಿಸುವ ದಿಸೆಯಲ್ಲಿ ಯಾವ ಪ್ರಯತ್ನವನ್ನೂ ಕೈಗೊಂಡಿಲ್ಲ. ಬದಲಾಗಿ ಬೆಳೆದುಬರುತ್ತಿರುವ ಜನತೆಯ ಹೋರಾಟಗಳನ್ನು ದಬ್ಬಾಳಿಕೆಯಿಂದ ಹತ್ತಿಕ್ಕಲು ಪ್ರಯತ್ನ ನಡೆಯುತ್ತಿವೆ. ಕಳೆದ ವರ್ಷದ ರೈತ ಚಳುವಳಿ, ಇತ್ತೀಚಿನ ಕಾರ್ಮಿಕರ ಚಳುವಳಿಗಳು ಈ ಘಟನೆಗಳಿಗೆ ಸ್ಪಷ್ಟ ನಿದರ್ಶನ.

ಡಿಸೆಂಬರ್ 26ರಿಂದ ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಮುಷ್ಕರ ಪ್ರಾರಂಭವಾಗಿತ್ತು. ಸಾರ್ವಜನಿಕ ಸಭೆ ನಡೆಸಲು ಹಲ್ಲುಗಿಂಜುವ ಪರಿಸ್ಥಿತಿ. ಸಭೆ-ಮೆರವಣಿಗೆ ನಡೆಸಲು ಯತ್ನಿಸಿದರೆ ನಗರದಲ್ಲಿ 144 ಸೆಕ್ಷನ್. ಕಾರ್ಮಿಕ ನಾಯಕರೆಂದು ತಮ್ಮನ್ನು ತಾವು ಕರೆದುಕೊಳ್ಳುತ್ತಿರುವ ಖಾನ್ ಮಂತ್ರಿವರ ಕೂಟದ ಮುಷ್ಕರ ಮುರಿಯುವ ಯತ್ನಕ್ಕೂ ಬಹಿರಂಗ ಬೆಂಬಲ. ಡಿ. ರಾಜ್‌ಗೋಪಾಲರ ಮೇಲೆ ಹಲ್ಲೆ ನಡೆಯಿತು.

ನಗರ(ಬೆಂಗಳೂರು)ದ ಬೃಹತ್ ಬಹುರಾಷ್ಟ್ರೀಯ ಸಂಸ್ಥೆಯಾದ ಮೈಕೋದ ಕಾರ್ಮಿಕರು ತಮ್ಮ ಕೆಲವು ಬೇಡಿಕೆಗಳಿಗೋಸ್ಕರ ಪ್ರಚಂಡ ಹೋರಾಟ ನಡೆಸಿದ್ದರು. ಇತರ ಕಾರ್ಮಿಕ ವಿಭಾಗಗಳ ಮುಷ್ಕರಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಸೌಹಾರ್ದ ಬೆಂಬಲ ನೀಡಿ ಕಾರ್ಮಿಕ ಚಳುವಳಿಗೆ ಹೊಸ ತಿರುವನ್ನು ನೀಡಲು ಕಾರಣಕರ್ತರಾಗಿದ್ದರು. ಮೈಕೊ ಕಾರ್ಮಿಕ ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾಯರು ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವರು. ಮೊದಲಿನಿಂದಲೂ ನಾಯಕತ್ವದ ಬದಲಾವಣೆಯನ್ನು ಬಹಿಸದ ಕೆಲವು ವಿಧ್ವಂಸಕ ಶಕ್ತಿಗಳು ಕಾರ್ಮಿಕರ ಐಕ್ಯತೆಯನ್ನು ಒಡೆಯಲು ಶ್ರಮಿಸುತ್ತಿದ್ದವು. ಈ ಶಕ್ತಿಗಳಿಗೆ ಎಫ್. ಎಂ. ಖಾನ್‌ರ ಕುಮ್ಮಕ್ಕು.

ಕೆಲವು ದಿನಗಳಿಂದ ನಡೆಯುತ್ತಿದ್ದ ಬೇಡಿಕೆಗಳ ಬಗೆಗಿನ ಮಾತುಕತೆ ನಿರ್ಣಾಯಕ ಹಂತಕ್ಕೆ ಬಂದಿರುವ ಸಂದರ್ಭದಲ್ಲಿ, ಬೇಡಿಕೆ ಈಡೇರಿದರೆ ಪ್ರಸಕ್ತ ನಾಯಕತ್ವ ಬದಲಾಯಿಸಲು ಸಾಧ್ಯವೇ ಇಲ್ಲವೆಂಬುದನ್ನು ಮನಗಂಡ ಕೆಲವರು ವಿಧ್ವಂಸಕ ಕೆಲಸ ಪ್ರಾರಂಭಿಸಿದ್ದಾರೆ. ಮಾರ್ಚ್ 9ರಂದು ಸರ್ವಸದಸ್ಯರ ಸಭೆ ಏರ್ಪಾಡಾಗಿತ್ತು. ಅದನ್ನು ಕಾಂಗೈ ಗೂಂಡಾಗಳ ನೆರವಿನಿಂದ ಹದಗೆಡಿಸಲಾಯಿತು. ಸಂಘದ ಆಫೀಸನ್ನು ಅಕ್ರಮವಾಗಿ ಕೈವಶಮಾಡಿಕೊಳ್ಳಲಾಯಿತು. ಪೋಲೀಸರು ಮೂಕಪ್ರೇಕ್ಷಕರಾಗಿದ್ದರು.

ಮಾರ್ಚ್ 16ರಂದು ಪೋಲೀಸ್ ಕಮೀಷನರ ಅನುಮತಿ ಪಡೆದು ಕಾಂಗ್ರೆಸ್(ಯು) ಆಫೀಸಿನಲ್ಲಿ ಸರ್ವಸದಸ್ಯರ ಸಭೆ ನಡೆದಾಗ ಹಾಡೇ ಹಗಲು ಚಾಕು-ಚೂರಿಗಳಿಂದ ಕಾಂಗೈ ಗೂಂಡಾಗಳು ಆಕ್ರಮಣ ಮಾಡಿದರು. ಕೆಲವು ಕಾರ್ಮಿಕರನ್ನು ಹೊಡೆದು ಗಾಯಗೊಳಿಸಲಾಯಿತು. ಈ ದಾಳಿಯ ನೇತೃತ್ವ ಕಾಂಗೈಯುವಕ ಧುರೀಣ ಹರಿಪ್ರಸಾದ್. ಗೂಂಡಾಗಳನ್ನು ಗೂಂಡಾ ನಾಯಕರನ್ನು ಬಂಧಿಸಿ ಕ್ರಮಕೈಗೊಳ್ಳುವ ಬದಲು ಪೋಲೀಸ್ ಅಧಿಕಾರಿ ಮೀಟಿಂಗನ್ನೇ ಮುಂದೂಡುವಂತೆ ಒತ್ತಾಯಿಸಿದ.

ದಾಂಡೇಲಿಯಲ್ಲಿ ಕಾರ್ಮಿಕ ಮುಖಂಡ ಕಾಂ. ಆರ್. ಜಿ. ಸ್ಥಳೀಕರರ ಮೇಲೆ ಹಲ್ಲೆ ಮಾಡಿದ್ದಾರೆ. ಹತ್ತಿಗಿರಣಿ ಕಾರ್ಮಿಕರ ರಾಜ್ಯವ್ಯಾಪಿ ಮುಷ್ಕರದ ದಿನದಂದು ಬೆಂಗಳೂರಿನ ರಾಜಾಮಿಲ್‌ನ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಮುನಿಸ್ವಾಮಿಯವರ ಮೇಲೆ ದಾಳಿಮಾಡಿದ್ದಾರೆ. ಮಾ. 17ರಂದು ಕಾಂಗ್ರೆಸ್ (ಯು) ಆಫೀಸಿಗೆ ನುಗ್ಗಿ ಬೋರ್ಡು ವಗೈರೆ ಕಿತ್ತುಹಾಕಿದ್ದಾರೆ.

(ಕಡೇ ಪುಟನೋಡಿ)

ಸ್ವಾತಂತ್ರ್ಯ ದಿನದಂದೂ ಕೈದಿಯಾಗಿಯೇ ಉಳಿದೆ

[ಮಾರ್ಚ್ 22, 1977ರಂದು ನಮ್ಮೆಲ್ಲರಆತ್ಮೀಯ ನಾಯಕ, ಮರೆಯಲಾಗದ ಮಹಾಯೋಧ ಕಾಂ. ಎ. ಕೆ. ಗೋಪಾಲನ್ ನಮ್ಮನ್ನಗಲಿ ಇಂದಿಗೆ (ಮಾರ್ಚ್ 22, 1981) ನಾಲ್ಕು ವರ್ಷಗಳಾದವು. ಜೀವನದುದ್ದಕ್ಕೂ ದೀನ-ದಲಿತರ ಏಳ್ಗೆಗೋಸ್ಕರ ಶ್ರಮಿಸಿದ ಮಹಾನಾಯಕನ ನೆನಪು ಮರೆಯಲು ಸಾಧ್ಯವೇ ಇಲ್ಲ. ಕಾಂ. ಎ. ಕೆ. ಜಿ. ಯವರ ಅಸೀಮ ತ್ಯಾಗ-ಧೈರ್ಯ ಇವು ಇಂದೂ ನಮ್ಮೆಲ್ಲರ ಕೈದೀವಿಗೆಯಾಗಿವೆ.

ಈ ಪ್ರಸಕ್ತ ಲೇಖನವನ್ನು ಕಾಂ. ಎ.ಕೆ.ಜಿ.ಯವರ ಆತ್ಮವೃತ್ತಾಂತದಿಂದ ಆಯ್ದುಕೊಳ್ಳಲಾಗಿವೆ. 30ರ ದಶಕದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಗೆದುರಾಗಿ ಭಾರತದ ಸ್ವಾತಂತ್ರ್ಯಕ್ಕೋಸ್ಕರ ಶ್ರಮಿಸಿದ ಕಾಂ. ಎ.ಕೆ.ಜಿ.ಯವರನ್ನು ಭಾರತದ ಸ್ವಾತಂತ್ರ್ಯ ದಿನದಂದೂ (ಆಗಸ್ಟ್ 15, 1947) ಬ್ರಿಟಿಷ್ ಚಕ್ರವರ್ತಿಗೆದುರಾಗಿ ಜನರನ್ನು ಎತ್ತಿಕಟ್ಟಿರುವ ಆರೋಪದ (ಐ.ಪಿ.ಸಿ. 124 ಎ.) ಮೇಲೆ ಜೈಲಿನಲ್ಲಿಟ್ಟದ್ದು ಭಾವೀ ಕಾಂಗ್ರೆಸ್ ಆಳ್ವಿಕೆಗೆ ಸ್ಪಷ್ಟ ನಿದರ್ಶನವಾಗಿತ್ತು. ಜನತೆಯ ನಿಜವಾದ ಸ್ವಾತಂತ್ರ್ಯಕ್ಕಾಗಿ ಶ್ರಮಿಸುತ್ತಿರುವ ಪುರೋಗಾಮಿ ಶಕ್ತಿಗಳನ್ನು ಹತ್ತಿಕ್ಕುತ್ತ ತನ್ನ ಪರಂಪರೆಯನ್ನು ಜನವಿರೋಧಿ ಕಾಂಗ್ರೆಸ್ ಸರಕಾರ ಇಂದೂ ಉಳಿಸಿಕೊಂಡು ಬಂದಿದ್ದು ಆಶ್ಚರ್ಯವೇನಿಲ್ಲ. ನೈಜ ಸ್ವಾತಂತ್ರ್ಯಕ್ಕೋಸ್ಕರ ಅವಿರತ ಹೋರಾಟವೊಂದೆ ಕಾಂ. ಎ.ಕೆ.ಜಿ.ಯವರಿಗೆ ಸಲ್ಲಿಸಬಹುದಾದ ಯೋಗ್ಯ ಶ್ರದ್ಧಾಂಜಲಿ.]

"1947ರ ಸ್ವಾತಂತ್ರ್ಯ ದಿನಕ್ಕೆ ಸಂಬಂಧಿಸಿದಂತೆ ಮದ್ರಾಸ್ ಸರಕಾರವು ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿತು. ಇ.ಎಂ.ಎಸ್. ಮತ್ತಿತರರು 14ನೇ ತಾರೀಖಿನಂದೇ ಕಲ್ಲಿಕೋಟೆಗೆ ತಲುಪಿದರು. ನನ್ನನ್ನು ಆಗಸ್ಟ್ 15ರಂದು ಬಿಡುಗಡೆಮಾಡಲಾಗುವುದೆಂದು ಸರಕಾರಿ ಪ್ರಕಟಣೆಯಲ್ಲಿ ಪ್ರತ್ಯೇಕವಾಗಿ ನಮೂದಿಸಲಾಗಿತ್ತು. ಆದರೆ ನನ್ನನ್ನು ಮಾತ್ರ ಬಿಡಲಿಲ್ಲ. ಉಳಿದವರೆಲ್ಲರನ್ನೂ ಬಿಡಲಾಯಿತು".

"ಎಲ್ಲಾ ಪಕ್ಷಗಳೂ ಸಂಯುಕ್ತವಾಗಿ ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವವನ್ನು ಆಚರಿಸಿದವು. ದೇಶಾದ್ಯಂತ ಅಭೂತಪೂರ್ವವಾದ ಉತ್ಸಾಹವೂ, ಆನಂದವೂ ವ್ಯಕ್ತವಾದವು. 1947 ಆಗಸ್ಟ್ 14ರಂದು ನಾನು ಕಣ್ಣಾನೂರಿನ ದೊಡ್ಡ ಜೈಲಿನಲ್ಲಿ ಏಕಾಂತವಾಸವನ್ನು ಅನುಭವಿಸುತ್ತಿದ್ದೆ. ಇತರ ಸ್ಥಾನಬದ್ಧತಾ ಕೈದಿಗಳೆಲ್ಲರೂ ಬಿಡುಗಡೆಗೊಂಡು ಹೊರಟು ಹೋಗಿದ್ದರು. ಆದರೆ ಕಾವುಂಪಾಯಿ ಮತ್ತು ಕರಿವೆಳ್ಳೂರು ಮೊಕದ್ದಮೆಗಳಲ್ಲಿ ವಿಚಾರಣೆ ಮುಗಿದ ಮತ್ತು ವಿಚಾರಣೆಗಾಗಿ ಬಾಕಿ ಇದ್ದ ಹಲವಾರು ಸಂಗಾತಿಗಳು ಅಲ್ಲಿದ್ದರು. ರಾತ್ರಿಯೆಲ್ಲಾ ನನಗೆ ನಿದ್ರೆ ಬರಲಿಲ್ಲ. ನಾಲ್ದೆಸೆಗಳಿಂದಲೂ ಜಯಕಾರಗಳು ಮೊಳಗುತ್ತಿದ್ದವು. "ಮಹಾತ್ಮಾ ಗಾಂಧಿಕೀ ಜೈ", "ಭಾರತ ಮಾತಾ ಕೀ ಜೈ" ಮೊದಲಾದ ಘೋಷಣೆಗಳು ಜೈಲಿನ ಗೋಡೆಗಳ ಮೂಲಕ ಪ್ರತಿಧ್ವನಿಸುತ್ತಿದ್ದವು. ನಾಡಿಗೇ ನಾಡೇ ಸೂರ್ಯೋದಯದ ನಂತರದ ವಿಜಯೋತ್ಸವಕ್ಕಾಗಿ ಕಾದಿತ್ತು. ಅನೇಕ ವರ್ಷಗಳಿಂದ ಇದಕ್ಕಾಗಿ ಹೋರಾಡಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡ ಎಷ್ಟೋ ಜನರು ಈ ದಿನಕ್ಕಾಗಿ ಕಾದಿದ್ದರು. ಸಂತೋಷವೂ ದುಃಖವೂ ಏಕಕಾಲಕ್ಕೆ ನನ್ನನ್ನು ಆವರಿಸಿದವು. ಯಾವ ಉದ್ದೇಶಕ್ಕಾಗಿ

(ಕಡೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು

ರಾಯಚೂರು

"ಅಂತರಾಷ್ಟ್ರೀಯ ಮಹಿಳಾ ವರ್ಷ"ದ ಅಂಗವಾಗಿ, ರಾಯಚೂರಿನ ಪ್ರಗತಿಪರ ಮಹಿಳಾ ಸಂಘವು ಮಾರ್ಚ್ 8ರಂದು ನಗರದ ಮಹಿಳಾ ಸಮಾಜದಲ್ಲಿ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು.

ಶ್ರೀಮತಿ ಗಿರಿಜಮ್ಮ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದರು. ಮಹಿಳಾ ಕಾರ್ಯಕರ್ತೆಯರಿಂದ ಕ್ರಾಂತಿಕಾರಿ ಹಾಡುಗಳಾದ ನಂತರ ಸುಲೋಚನಾ, ಸುಮಿತ್ರಾ ಮತ್ತು ಸರಸ್ವತಿ ಮೊದಲಾದವರು "ಉದ್ಯೋಗ ಮತ್ತು ಮಹಿಳೆ", "ಆರ್ಥಿಕಸ್ವಾತಂತ್ರ್ಯ ಮತ್ತು ಮಹಿಳೆ" ಎಂಬ ವಿಷಯದ ಮೇಲೆ ಮಾತನಾಡಿದರು.

ಅಧ್ಯಕ್ಷತೆವಹಿಸಿದ್ದ ಶ್ರೀಮತಿ ಶಾಮಲಾ ಇವರು ಅಂತರ್‌ರಾಷ್ಟ್ರೀಯ ಮಹಿಳಾ ವರ್ಷದ ಮಹತ್ವವನ್ನು ವಿವರಿಸುತ್ತಾ, ವರದಕ್ಷಿಣೆ ಮೊದಲಾದ ಪಿಡುಗುಗಳ ವಿರುದ್ಧ ಹೋರಾಡಲು ಕರೆಕೊಟ್ಟರು. ಕೊನೆಗೆ ಮೀನಾ ಇವರು ವಂದನಾರ್ಪಣೆ ಮಾಡಿದರು.

ಹೆಂಗವಳ್ಳಿ

ಕುಂದಾಪುರ ತಾಲ್ಲೂಕಿನ ಹೆಂಗವಳ್ಳಿ ಗ್ರಾಮದಲ್ಲಿ 12-3-81ರಂದು ರೈತ-ಕೃಷಿಕೂಲಿಕಾರರ ಸಭೆ ನಡೆಯಿತು. ತಾಲ್ಲೂಕು ರೈತಸಂಘದ ಅಧ್ಯಕ್ಷರಾದ ಕಾಂ. ಶಿವರಾಂಶೆಟ್ಟರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ರೈತ ಸಂಘದ ಅಧ್ಯಕ್ಷ ಅಬ್ರಹಾಂ ಕರ್ಕಡರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ನಂತರ ಶ್ರೀ ಸಿದ್ಧಯ್ಯಶೆಟ್ಟಿ ಅಧ್ಯಕ್ಷರಾಗಿರುವ, ಶ್ರೀ ರಘುರಾಮಶೆಟ್ಟಿ ಕಾರ್ಯದರ್ಶಿಯಾಗಿರುವ ರೈತ–ಕೃಷಿ ಕೂಲಿಕಾರರ ಹೆಂಗವಳ್ಳಿ ಗ್ರಾಮ ಕಮಿಟಿಯನ್ನು ರಚಿಸಲಾಯಿತು. ಕೊನೆಗೆ ಕೋಟೇಶ್ವರ ಗ್ರಾಮಪಂಚಾಯಿತಿ ಉಪಾಧ್ಯಕ್ಷ ಯು. ದಾಸ್ ಭಂಡಾರಿಯವರು ವಂದನಾರ್ಪಣೆ ಮಾಡಿದರು.

ಭೂಮಾಲೀಕರ ಭದ್ರಕೋಟೆಯೆನಿಸಿದ ಹೆಂಗವಳ್ಳಿಯಲ್ಲಿ ರೈತ–ಕೂಲಿಕಾರರನ್ನು ಸಂಘಟಿಸುವಲ್ಲಿ ಕಾಂ. ಬಸವಶೆಟ್ಟರು ತುಂಬ ನೆರವಾಗಿದ್ದಾರೆ.

ಕೋಣಿ

ಕುಂದಾಪುರ ತಾಲ್ಲೂಕಿನ ಕೋಣಿಯಲ್ಲಿ ಯುವಜನ ಸಂಘದ ಐದನೇ ವಾರ್ಷಿಕೋತ್ಸವವನ್ನು ಮಾರ್ಚ್ 14ರಂದು ಆಚರಿಸಲಾಯಿತು. ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯ ಶ್ರೀ ಬಿ. ಅಪ್ಪಣ್ಣಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು "ಸಮುದಾಯ" (ಉಡುಪಿ)ದ ಕಾರ್ಯಕರ್ತ ಶ್ರೀ ವಾಸುದೇವ್ ಉಚ್ಚಿಲರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಎಸ್.ಎಫ್.ಐ.ನ ಅಧ್ಯಕ್ಷ ಕಾಂ. ಆರ್. ಜಯಕುಮಾರ್‌ರು ಶುಭಕೋರಿ ಮಾತನಾಡಿದರು.

ಶ್ರೀ ಕೆ. ರಾಧಾಕೃಷ್ಣ ಇವರ ಸಂದೇಶವಾಚನದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳಾದವು. ಪ್ರಾರಂಭದಲ್ಲಿ ಕೆ. ಆನಂದಭಂಡಾರಿ ಸ್ವಾಗತಿಸಿದರು. ಗುರುರಾಜ್ ಕೆ. ನಾಯ್ಕ ವಂದಿಸಿದರು. ವೆಂಕಟೇಶ್ ನಾಯಕ್ ಇವರು ಕಾರ್ಯಕ್ರಮ ನಿರ್ದೇಶಿಸಿದರು.

ಜಡ್ಕಲ್

15-3-81ರಂದು ಕುಂದಾಪುರ ತಾಲ್ಲೂಕು ರೈತಸಂಘದ ಆಶ್ರಯದಲ್ಲಿ ಜಡ್ಕಲ್ ಗ್ರಾಮದ ಫಾರೆಸ್ಟ್ ಠಾಣೆಯ ಬಳಿ ಬೃಹತ್ ಸಾರ್ವಜನಿಕ ಸಭೆ ನಡೆಯಿತು. ಸುಮಾರು 8 ಮೈಲು ದೂರದ ಮುದ್ದೂರು ಮತ್ತಿತರ ಗ್ರಾಮಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ರೈತ-ಕೃಷಿಕೂಲಿಕಾರರು ಮೆರವಣಿಗೆಯಲ್ಲಿ ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಚಾಂಡಿನಾಕ್ ಮಟ್ಟವರ್ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕುಂದಾಪುರ ರೈತಸಂಘದ ಅಧ್ಯಕ್ಷರಾದ ಕಾಂ. ಶಿವರಾಂಶೆಟ್ಟಿ, ವಿದ್ಯಾರ್ಥಿ ಮುಖಂಡ ಕಾಂ. ಆರ್. ಜಯಕುಮಾರ್, ಕಾರ್ಮಿಕ ಮುಖಂಡ ಕಾಂ. ಕೆ. ಶಂಕರ್, ಜಿಲ್ಲಾ ರೈತಸಂಘದ ಕಾರ್ಯದರ್ಶಿಯವರಾದ ಕಾಂ. ಯು. ಜನಾರ್ಧನ ನಾಯಕ್ ಮತ್ತು ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಅಬ್ರಹಾಂ ಕರ್ಕಡರು ಮಾತನಾಡಿದರು. ಸಂಘಟಿತ ಹೋರಾಟದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಪ್ರಾರಂಭದಲ್ಲಿ ಶ್ರೀ ಏಣಿಯಪ್ಪ ಸ್ವಾಗತಿಸಿದರು.

●

ಮೀರತ್ ಮೊಕದ್ದಮೆ

[ಮಾರ್ಚ್ 20, 1929ರಂದು IPC 121 A ಮೇರೆಗೆ ರಾಷ್ಟ್ರದ ನಾನಾ ಭಾಗಗಳಲ್ಲಿ ಕಮ್ಯುನಿಸ್ಟರನ್ನು, ಪುರೋಗಾಮಿ ವಿಚಾರಧಾರೆಯ ಯುವಕರನ್ನು ಬಂಧಿಸಲಾಯಿತು. ಕಮ್ಯುನಿಸ್ಟ್ ವಿಚಾರಧಾರೆಯನ್ನು ಭಾರತಕ್ಕೆ ಪ್ರವೇಶಿಸಲು ಅವಕಾಶ ಕೊಡಲೇ ಕೊಡದೆಂಬ ತೀರ್ಮಾನ ಬ್ರಿಟಿಷ್ ಸಾಮ್ರಾಜ್ಯಶಾಹಿಗಳದಾಗಿತ್ತು. ಭಾರತದ ನ್ಯಾಯಾಂಗದ ಚರಿತ್ರೆಯಲ್ಲೇ ಅತ್ಯಂತ ದೀರ್ಘವಾಗಿ ನಡೆದ ವಿಚಾರಣೆ ಮೀರತ್ ಮೊಕದ್ದಮೆ. 52 ವರ್ಷಗಳ ಹಿಂದೆ ನಡೆದ ಈ ಐತಿಹಾಸಿಕ ಮೊಕದ್ದಮೆಯ ಸಂಕ್ಷಿಪ್ತ ವಿವರವನ್ನು ಈ ಲೇಖನ ಒಳಗೊಂಡಿದೆ]

ಚರಿತ್ರೆಯ ಪುಟಗಳಲ್ಲಿ ಚಿರಸ್ಥಾಯಿಯಾಗಿ ಬೂದಿ ಮುಚ್ಚಿದ್ದ ಕೆಂಡದ ಹಾಗೆ ಕ್ರಾಂತಿ ಕಿಡಿಗಳನ್ನು ಸಿಡಿಸಿದ ಮೀರತ್ ಒಳಸಂಚು ಮೊಕದ್ದಮೆಯು ಇತಿಹಾಸದ ಪುಟಗಳಲ್ಲಿ ಪ್ರಾಮುಖ್ಯವಾಗಿ ಉಳಿದಿದೆ. ಲಾಹೋರ್ ಮೊಕದ್ದಮೆಯಷ್ಟೇ ಪ್ರಮುಖಸ್ಥಾನಹೊಂದಿರುವ ಮೀರತ್ ಮೊಕದ್ದಮೆಯು ಭಾರತದ ಕ್ರಾಂತಿಕಾರಿಗಳಿಗೆ ನಿತ್ಯ ಚೇತನವಾಗಿ ಚರಿತ್ರೆಯಲ್ಲಿ ರಾರಾಜಿಸುತ್ತಿದೆ. ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಸೈದ್ಧಾಂತಿಕ ಮತ್ತು ರಾಜಕೀಯ ತಿರುವುಗಳನ್ನು ಕೊಡುವುದರಲ್ಲಿ ಪ್ರಮುಖ ಪಾತ್ರವಹಿಸಿದೆ. ಸ್ಫೂರ್ತಿಕೊಡುವ ಮಹಾನ್ ಹೋರಾಟದ ಪ್ರತೀಕವಾಗಿ ಉಳಿದಿದೆ. ಭಾರತದ ನ್ಯಾಯಾಂಗ ಚರಿತ್ರೆಯಲ್ಲಿ ಅತೀ ದೀರ್ಘವಾದ ವಿಚಾರಣೆಯನ್ನು ಪಡೆದ ಮತ್ತು ಅತಿದೊಡ್ಡ ಕ್ರಿಮಿನಲ್ ಮೊಕದ್ದಮೆಯಾಗಿ, ಕಮ್ಯುನಿಸ್ಟ್ ಸಿದ್ಧಾಂತದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗೆ ನೇರ ಸವಾಲನ್ನು ಹಾಕಲು ಉಪಯೋಗಿಸಿದ ಒಂದು ಕ್ರಾಂತಿಕಾರಿ ವೇದಿಕೆಯಾಗಿತ್ತು.

ಲೆನಿನ್‌ರ ನೇತೃತ್ವದಲ್ಲಿ ರಷ್ಯದಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯು ಜಗತ್ತಿನ ಚರಿತ್ರೆಗೆ ಹೊಸ ಆಯಾಮ ನೀಡಿತು. ಅಷ್ಟೇ ಅಲ್ಲ ಶೋಷಣಾರಹಿತ ಸಮಾಜದ ವಾಸ್ತವಿಕತೆಯನ್ನು ಜಗತ್ತಿನ ದುಡಿಯುವ ಜನತೆಯ ಮುಂದಿಟ್ಟಿತು. ಇದರಿಂದ ಪ್ರಭಾವಿತಗೊಂಡ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ವಿರೋಧಿ ಹೋರಾಟಗಳು ಜಗತ್ತಿನಲ್ಲಿ, ಪ್ರಮುಖವಾಗಿ ಭಾರತದಲ್ಲಿ ಹೊಸ ತಿರುವನ್ನು ಪಡೆದವು.

ಮೊದಲ ಮಹಾಯುದ್ಧದ ನಂತರ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರವಾಗಿ ಅದರ ಕ್ರೂರ ಪರಿಣಾಮವು ಜಗತ್ತಿನಾದ್ಯಂತ ಕಂಡುಬರತೊಡಗಿತು. ಬ್ರಿಟಿಷ್ ವಸಾಹತಾಗಿದ್ದ ಭಾರತಕ್ಕಂತೂ ಹೊರಲಾರದ ಹೊರೆ ಆಯಿತು. ನಮ್ಮ ದೇಶದಲ್ಲಿ ಅಪಾರವಾಗಿ ದೊರೆಯುತ್ತಿದ್ದ ನೈಸರ್ಗಿಕ ಸಂಪತ್ತು ಮತ್ತು ಅತೀ ಸುಲಭದರದಲ್ಲಿ ದೊರೆಯುತ್ತಿದ್ದ ದುಡಿಮೆಯನ್ನು ಕೊಳ್ಳೆಹೊಡೆಯುವದು ವಿಪರೀತವಾಯಿತು. ಭಾರತದಲ್ಲಿ ಬ್ರಿಟಿಷರ ಆರ್ಥಿಕ ಶೋಷಣೆ ಎಲ್ಲೆ ಮೀರಿತು ಇದರಿಂದಾಗಿ ಜನತೆಯ ಹೋರಾಟಗಳು ತೀವ್ರವಾದವು. ಈ ಹೋರಾಟಗಳನ್ನು ದಮನ ಮಾಡಲು ಬ್ರಿಟಿಷರು ಎರಡು ಪ್ರಮುಖ ಕರಾಳ ಶಾಸನಗಳನ್ನು ಜಾರಿಗೆ ತಂದರು. 1. ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಬಿಲ್ 2. ಕ್ರಿಮಿನಲ್ ಲಾ ಎಮರ್ಜನ್ಸಿ ಪವರ್ ಬಿಲ್.

ರಷ್ಯಾದ ಕ್ರಾಂತಿಯಿಂದಾಗಿ ಜಗತ್ತಿನಲ್ಲಿ ಮೂಡಿಬಂದ ಹೊಸ ಶಕ್ತಿಗಳ ಅವಿಭಾಜ್ಯ ಅಂಗವಾಗಿ ಭಾರತದಲ್ಲೂ ಸಹ ಅದರ ಉಗಮ ಪ್ರಾರಂಭವಾಯಿತು. ನಿರಂತರವೆನಿಸಿದ್ದ ಬಂಡವಾಳಶಾಹಿ ಪದ್ಧತಿಯ ಅನಿವಾರ್ಯ ಸಾವು ಆರಂಭವಾಗಿ ಮಾರ್ಕ್ಸ್, ಏಂಗಲ್ಸ್‌ರ ಸಿದ್ಧಾಂತದ ಸತ್ಯತೆಯು ಗೋಚರವಾಯಿತು. ಈ ಸತ್ಯಾಂಶವನ್ನು ಜಗತ್ತಿನ ನಿಷ್ಠಾವಂತ ರಾಜಕಾರಣಿಗಳು ಮತ್ತು ಬುದ್ಧಿಜೀವಿಗಳು ಒಪ್ಪಲೇಬೇಕಾಯಿತು. ಇದರಿಂದಾಗಿ ಹೊಸ ರಾಜಕೀಯ ಶಕ್ತಿಗಳ ಉಗಮ ಅನಿವಾರ್ಯವಾಯಿತು.

1919ರ ಏಪ್ರಿಲ್ ತಿಂಗಳಲ್ಲಿ ಪಂಜಾಬಿನ ಜಾಲಿಯನ್‌ವಾಲಾ ಬಾಗ್‌ನಲ್ಲಿ ನಡೆದ ಭಾರತೀಯರ ನರಹತ್ಯೆಯು ಭಾರತದ ಸ್ವಾತಂತ್ರ್ಯ ಚಳುವಳಿಯ ನಾಯಕರ ಕಣ್ಣು ತೆರೆಯಿಸಿ ಅಸಹಕಾರ ಚಳುವಳಿ ಪ್ರಾರಂಭವಾಯಿತು. ಈ ಚಳುವಳಿಯು ಅಹಿಂಸಾತ್ಮಕವಾಗಿ ಇರಬೇಕೆಂದು ಕಾಂಗ್ರೆಸ್ ನಾಯಕರು ಬಯಸಿದ್ದರು. ಆದರೆ ಹೊಸ ರಾಜಕೀಯ ಶಕ್ತಿಗಳ ಉಗಮದ ಅಲೆಯಿಂದಾಗಿ ಈ ಚಳುವಳಿ ಕ್ರಾಂತಿಕಾರಿ ಸ್ವರೂಪ ಪಡೆಯಲಾರಂಭಿಸಿತು. ಚೌರಿಚೌರಾ ಘಟನೆಯ ನೆಪವೊಡ್ಡಿ, 1922 ಫೆಬ್ರವರಿ 11–12ರಂದು ಅವಸರವಾಗಿ ಬಾರ್ಡೋಲಿಯಲ್ಲಿ ಗಾಂಧೀ ನಾಯಕತ್ವದಲ್ಲಿ ಕರೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಚಳುವಳಿಯನ್ನು ವಾಪಸ್ ತೆಗೆದುಕೊಂಡಿತು. ಮಹಾತ್ಮರ ಈ ಕ್ರಮ ಜವಹರಲಾಲ್ ನೆಹರೂ ಸೇರಿ ಅನೇಕ ಸ್ವಾತಂತ್ರ್ಯ ಹೋರಾಟದ ನಾಯಕರನ್ನು ದಂಗುಬಡಿಸಿತು. ಇದರಿಂದಾಗಿ ದೇಶದಲ್ಲಿ ಒಂದು ರೀತಿಯ ರಾಜಕೀಯ ನಾಯಕತ್ವದ ಶೂನ್ಯತೆ ಉಂಟಾಯಿತು. ಎಡಪಂಥವಾದ ಶಕ್ತಿಗಳ ಬೆಳವಣಿಗೆಗೆ ಅವಕಾಶ ಒದಗಿತು.

ತುರ್ಕಸ್ತಾನ (ಟರ್ಕಿ)ದಲ್ಲಿ ಬ್ರಿಟಿಷರ ವಿರುದ್ಧ ನಡೆಯುತ್ತಿದ್ದ ಹಿಜರಾತ್ (Hijrat) ಚಳುವಳಿಯಲ್ಲಿ ಭಾಗವಹಿಸಲು ಹೋಗಿದ್ದ ಪಂಜಾಬ್ ಮತ್ತು ಸಿಂಧದ ಮುಸ್ಲಿಂ ಯುವಕರು ಬ್ರಿಟಿಷರ ಕಪಿಮುಷ್ಠಿಯಿಂದ ತಪ್ಪಿಸಿಕೊಂಡು ರಷ್ಯಾಕ್ಕೆ ಬಂದರು. ಅಕ್ಟೋಬರ ಕ್ರಾಂತಿಯಿಂದಾಗಿ ರಷ್ಯಾದ ಜನಜೀವನದಲ್ಲಿ ಉಂಟಾದ ಅದ್ಭುತ ಬದಲಾವಣೆಯಿಂದ ಪ್ರಭಾವಿತರಾದರು. ಕಮ್ಯುನಿಸಂನಿಂದ ಆಕರ್ಷಿತರಾದರು. ಈ ಕೆಲವು ಯುವಕರ ಪ್ರಯತ್ನದಿಂದ ರಷ್ಯಾದ ತಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಿದರು. ಭಾರತದಲ್ಲೂ ಕಮ್ಯುನಿಸ್ಟ್ ಸಿದ್ಧಾಂತವನ್ನು ಪ್ರಚಾರಮಾಡುವ ದೃಷ್ಟಿಯಿಂದ ಭಾರತಕ್ಕೆ ಬರುವ ದಾರಿಯಲ್ಲೇ (ಪೇಶಾವರನಲ್ಲಿ) ಬಂಧಿತರಾದರು. ಕಮ್ಯುನಿಸಂನ ಕಡುವಿರೋಧಿಗಳಾದ ಬ್ರಿಟಿಷರು ಭಾರತದಲ್ಲಿ ಕಮ್ಯುನಿಸಂ ಚಿಗುರಬಾರದೆಂಬ ಪಣತೊಟ್ಟಿದ್ದರು.

ಪೇಶಾವರದಲ್ಲಿ ಬಂಧಿತರಾದ ಯುವಕರ ಮೇಲೆ ಮೊಕದ್ದಮೆ ಹೂಡಿದರು. ಈ ಮೊಕದ್ದಮೆ "ಪೇಶಾವರ ಒಳಸಂಚು ಮೊಕದ್ದಮೆ" ಎಂದು ಪ್ರಸಿದ್ಧವಾಗಿದೆ. ಬ್ರಿಟಿಷರ ಆಡಳಿತವನ್ನು ವಿರೋಧಿಸಿರುವ, ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಮಾಸ್ಕೋದ ಜೊತೆ ಸಂಪರ್ಕ ಇಟ್ಟುಕೊಂಡಿರುವ ಕಾರಣಕ್ಕಾಗಿ ಬಂಧಿತರನ್ನು ಶಿಕ್ಷೆಗೆ ಒಳಪಡಿಸಲಾಯಿತು. ಈ ಮೊದಲನೆಯ ಒಳಸಂಚು ಮೊಕದ್ದಮೆಯ ತೀರ್ಪು 1922 ಮೇ 31ರಂದು ಬಂದರೆ ಕೊನೆಯ ಮೊಕದ್ದಮೆಯ ತೀರ್ಪು 1927ರಲ್ಲಿ ಬಂದಿತು. ಈ ಐದು ವರ್ಷಗಳ ಮಧ್ಯೆ ಬೇರೆ 5 ಮೊಕದ್ದಮೆಗಳನ್ನು ಹಾಕಲಾಗಿತ್ತು. ಆಪಾದಿತರಿಗೆ ಉಗ್ರವಾದ, ಅಮಾನುಷ ಶಿಕ್ಷೆಗೆ ಗುರಿಪಡಿಸಲಾಯಿತು. ತಿಪ್ಪರಲಾಗ ಹಾಕಿದರೂ ಕಮ್ಯುನಿಸಂ ಬೆಳವಣಿಗೆಯನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ. ಬದಲು ದೇಶದ ಪ್ರಮುಖ ನಗರಗಳಲ್ಲಿ ಕಮ್ಯುನಿಸ್ಟ್ ಗುಂಪುಗಳು ಹುಟ್ಟಿಕೊಂಡಿದ್ದವು. ಈ ಗುಂಪುಗಳ ಪ್ರಮುಖರೆಂದರೆ ಕಲಕತ್ತೆಯಲ್ಲಿ ಮುಜಾಫರ್ ಅಹಮ್ಮದ, ಮುಂಬಯಿಯಲ್ಲಿ ಡಾಂಗೆ, ಲಾಹೋರನಲ್ಲಿ ಗುಲಾಂ ಹುಸೇನ್ ಮತ್ತು ಮದ್ರಾಸಿನಲ್ಲಿ ಶಿಂಗಾರವೇಲು ಚೆಟ್ಟಿಯಾರ ಮೊದಲಾದವರು. ಈ ಗುಂಪುಗಳನ್ನು ಏಕೀಕರಿಸಿ 1925ರ ಡಿಸೆಂಬರ್‌ನಲ್ಲಿ ಕಾನ್ಪುರದಲ್ಲಿ ಸಮ್ಮೇಳನ ನಡೆದು ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ಜನ್ಮತಾಳಿತು.

ಪೇಶಾವರ ಮೊಕದ್ದಮೆಯ ನಂತರ ಕಮ್ಯುನಿಸ್ಟ್ ಚಳುವಳಿ ನಿಲ್ಲಬಹುದೆಂದು ಆಶಿಸಿದ್ದ ಬ್ರಿಟಿಷರಿಗೆ ಭ್ರಮನಿರಸನವಾಯಿತು. ದೇಶದ ಎಲ್ಲ ಕಡೆ ಕ್ರಾಂತಿಕಾರಿ ಚಟುವಟಿಕೆಗಳು ಪ್ರಾರಂಭವಾಗಿ ಕಾರ್ಮಿಕರ ಮತ್ತು ಮಧ್ಯಮವರ್ಗದ ಬುದ್ಧಿಜೀವಿಗಳ ಮಧ್ಯೆ ಹೆಚ್ಚಿನ ಪ್ರಭಾವಪಡೆಯತೊಡಗಿದವು. ಮತ್ತೆ ಮರ್ಧನ ಪ್ರಾರಂಭವಾಯಿತು. "ಕಮ್ಯುನಿಸ್ಟರು ದೇಶದ್ರೋಹಿಗಳು", "ಭಾರತದ ಸಂಸ್ಕೃತಿಯ ವಿರೋಧಿಗಳು" ಎಂಬ ಪ್ರಚಾರ ಪ್ರಾರಂಭವಾಯಿತು.

[ಮುಂದುವರೆಯುವುದು]

ಮೋಸದ ಮುಂಗಡ ಪತ್ರ!

ಆರ್. ಚಂದ್ರ

ಆರ್ಥಿಕ ಸಮೀಕ್ಷೆ :

1981–82ರ ಮುಂಗಡಪತ್ರ ಪಾರ್ಲಿಮೆಂಟಿನಲ್ಲಿ ಫೆಬ್ರವರಿ 28 ರಂದು ಮಂಡಿಸಲಾಗಿದ್ದು, ಅದರ ಮೇಲೆ ಈಗ ಚರ್ಚೆ ನಡೆಯುತ್ತಿದೆ. ಇದು ಇಂದಿರಾ ಸರಕಾರದ ಹಾಗೂ ಆರನೇ ಪಂಚವಾರ್ಷಿಕ ಯೋಜನೆಯ ಅವಧಿಯ (1980–85) ಎರಡನೇ ಮುಂಗಡಪತ್ರ. ಇದರಲ್ಲಿ ಅನಿರೀಕ್ಷಿತವಾಗಿ ಅತ್ಯಲ್ಪ ಅಪ್ರತ್ಯಕ್ಷ ತೆರಿಗೆ ಸೂಚಿಸಲಾಗಿದೆ, 14ಲಕ್ಷ ಜನರಿಗೆ ಆದಾಯ ತೆರಿಗೆಯಿಂದ ಸಂಪೂರ್ಣ ರಿಯಾಯಿತಿ ಸಿಕ್ಕಿದೆ, ಇನ್ನೂ 11 ಲಕ್ಷ ಜನರಿಗೆ ಆದಾಯ ತೆರಿಗೆಯಲ್ಲಿ ಗಣನೀಯ ರಿಯಾಯಿತಿ ಸಿಕ್ಕಿದೆ, ಕೈಗಾರಿಕೋದ್ಯಮಗಳ ತೆರಿಗೆ ಕಡಿಮೆ ಮಾಡಲಾಗಿದೆ. ಉಳಿತಾಯದ ಮೇಲೆ ಬಡ್ಡಿದರವನ್ನು ಹೆಚ್ಚಿಸಲಾಗಿದೆ ಎಂದು ವ್ಯಾಪಕವಾಗಿ ಹೊಗಳಿಕೆ ಕೇಳಿಬರುತ್ತಿದೆ. ಆರ್ಥಿಕ ದುಃಸ್ಥಿತಿಯ ದುಃಸ್ವಪ್ನ ದೂರವಾಗುತ್ತಿದೆ. ಕರಭಾರ ಕಡಿಮೆಯಾಗಿ, ಉಳಿತಾಯ ಹೆಚ್ಚಿ, ಬಂಡವಾಳ ಹೂಡಿಕೆ ಅಧಿಕಗೊಂಡು, ಉತ್ಪಾದನೆ ಹೆಚ್ಚಿ, ಬೆಲೆ ಮಟ್ಟ ಹತೋಟಿಗೆ ಬರಲಿದೆ ಎಂದು ಕೇಂದ್ರ ಅರ್ಥಮಂತ್ರಿ ಆರ್. ವೆಂಕಟರಾಮನ್ ತನ್ನ ಆರ್ಥಿಕ ಸಮೀಕ್ಷೆಯಲ್ಲಿಯೂ, ಮುಂಗಡಪತ್ರದಲ್ಲಿಯೂ ಆಶಾಭಾವನೆ ವ್ಯಕ್ತಪಡಿಸಿದ್ದಾರೆ. ಆಶೆಗಳೇ ಕುದುರೆಗಳಾಗಿದ್ದರೆ ಆಕಾಶಕ್ಕೂ ನೆಗೆಯಬಹುದು! ಆದರೆ, ಇವು ಬಿಸಿಲುಕುದುರೆಗಳು, ಕೇವಲ ಭ್ರಮೆ! ಮುಂಗಡಪತ್ರದಲ್ಲಿ ಹೇಳಿದ್ದಕ್ಕಿಂತ ಹೇಳದೇ ಇರುವುದೇ ಹೆಚ್ಚು, ಇದು ರಾಜಕೀಯವಾಗಿ ಬಹಳ ಬುದ್ಧಿವಂತಿಕೆಯಿಂದ ಮಾಡಿದ ಮೋಸದ ಮುಂಗಡಪತ್ರ!

ಅಪ್ರತ್ಯಕ್ಷ ತೆರಿಗೆ- ರೂ. ೨೨೭೭ ಕೋಟಿ :

ತೋರಿಕೆಗೆ ಕೇಂದ್ರ ಮುಂಗಡಪತ್ರದಲ್ಲಿ 1981-82ಕ್ಕೆ ರೂ. 271 ಕೋಟಿಯಷ್ಟೇ ಹೊಸ ಅಪ್ರತ್ಯಕ್ಷ ತೆರಿಗೆ ವಿಧಿಸಿದ್ದರೂ, ಇದೇ ವರ್ಷದ ರೈಲ್ವೆ ಮುಂಗಡಪತ್ರದಲ್ಲಿ ಸಾರಿಗೆ ಹಾಗೂ ಸಂಚಾರದ ದರಗಳನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸಿ ರೂ. 356 ಕೋಟಿಯಷ್ಟು ಕರಭಾರ ಜನರ ಮೇಲೆ ಹೇರಲಾಗಿದೆ. ಉಪ್ಪು, ಕಟ್ಟಿಗೆ, ಮಸಿ, ಕೆಲವು ಔಷಧಿ ಸಾಮಗ್ರಿಗಳನ್ನು ಬಿಟ್ಟು, ರೈಲಿನಲ್ಲಿ ಸಾಗಿಸುವ ಎಲ್ಲಾ ಸರಕುಗಳ ಸಾರಿಗೆಯ ದರಗಳನ್ನು ಶೇ. 15 ರಷ್ಟು ಹೆಚ್ಚಿಸಲಾಗಿದೆ. ಇದರ ಭಾರ 3–4 ಪಟ್ಟು ಅಂತಿಮವಾಗಿ ಗ್ರಾಹಕರ ಮೇಲೆ ಬೀಳುವುದು. ಈ ಮೊದಲೇ ರಸ್ತೆ ಸಾರಿಗೆ ಹಾಗೂ ಪ್ರಯಾಣ ದರಗಳನ್ನು ಎಲ್ಲಾ ರಾಜ್ಯ ಸರಕಾರಗಳೂ ಏರಿಸಿರುವುದರಿಂದ ಜೀವನಾವಶ್ಯಕ ವಸ್ತುಗಳ ಅಂತಿಮ ಮಾರುಕಟ್ಟೆಯ ಬೆಲೆಗಳು ವಿಪರೀತ ಏರಿವೆ. ಈ ಮಧ್ಯೆ, ಕೇಂದ್ರಸರಕಾರವು ಕಲ್ಲಿದ್ದಲು, ಕಬ್ಬಿಣ, ಉಕ್ಕು, ಪೆಟ್ರೋಲಿಯಂ ಇತ್ಯಾದಿ ಮೂಲ ಪದಾರ್ಥಗಳ ಬೆಲೆಗಳನ್ನು ಹೆಚ್ಚಿಸಿದೆ. ಇನ್ನೂ ಇಂತಹ ಅನೇಕ ಮೂಲ ಪದಾರ್ಥಗಳ ಬೆಲೆಗಳನ್ನು ಹೆಚ್ಚಿಸುವ ನಿರೀಕ್ಷೆ ಇದೆ. ಆದುದರಿಂದ, ಕೇಂದ್ರ ಮುಂಗಡಪತ್ರದಲ್ಲಿ ಸೂಚಿಸಿದ ಅಪ್ರತ್ಯಕ್ಷ ತೆರಿಗೆ, ರೈಲ್ವೆ ಮುಂಗಡಪತ್ರದಲ್ಲಿನ ಸಾರಿಗೆ ಹಾಗೂ ಸಂಚಾರ ದರಗಳ ಏರಿಕೆ, ಮೂಲಭೂತ ಪದಾರ್ಥಗಳ ಬೆಲೆಏರಿಕೆ, ಇವೆಲ್ಲವುಗಳನ್ನೂ ಗಣನೆಗೆ ತೆಗೆದುಕೊಂಡರೆ, ಈ ವರ್ಷ ಒಟ್ಟು ರೂ. 2277 ಕೋಟಿ ಅಪ್ರತ್ಯಕ್ಷ ತೆರಿಗೆಯನ್ನು ಜನರ ಮೇಲೆ ಹೇರಿದಂತಾಗುವುದು.

ಕೊರತೆಹಣ ಸೃಷ್ಟಿ- ರೂ. ೪೦೦೦ ಕೋಟಿ :

ತೋರಿಕೆಗೆ ಮುಂಗಡಪತ್ರದಲ್ಲಿ ರೂ. 1539 ಕೋಟಿ ಕೊರತೆಯನ್ನು ಸೂಚಿಸಲಾಗಿದೆ. ಈ ಅಂದಾಜು ಮಾಡುವಾಗ ರೂ. 800 ಕೋಟಿಯಷ್ಟು 1981-82ರಲ್ಲಿ ಕಪ್ಪುಹಣ ಬೇರರ್‌ಬಾಂಡಿನಲ್ಲಿ ತೊಡಗಿಸಿ ಬಿಳಿಹಣವಾಗಿ ಸರಕಾರದ ಖಜಾನೆಗೆ ಬರುವುದಾಗಿ ನಿರೀಕ್ಷಿಸಲಾಗಿತ್ತು. ಆದರೆ, 1980–81ರಲ್ಲಿ ರೂ. 200 ಕೋಟಿಯಷ್ಟು ಈ ರೀತಿ ಕಪ್ಪುಹಣ ಬಿಳಿಹಣವಾಗಿ ಬರುವುದೆಂದು ನಿರೀಕ್ಷಿಸಿದ್ದರೂ ಇಷ್ಟರವರೆಗೆ ರೂ. 34 ಕೋಟಿಗಳಷ್ಟೇ ಸಂಗ್ರಹವಾಗಿದೆ. ಕಪ್ಪುಹಣ ಬಿಳಿಹಣವಾಗಿ ಬಂದರೂ ಬಾರದಿದ್ದರೂ, ಅದರ ಪರಿಣಾಮ ಕೊರತೆ ಹಣ ಸೃಷ್ಟಿಯದ್ದೇ. ಆದುದರಿಂದ, ಈ ವರ್ಷ ಒಟ್ಟು ಕೊರತೆ ಹಣ ಸೃಷ್ಟಿ ರೂ. 2339 ಕೋಟಿಯಷ್ಟಾಗಿದ್ದು, ವರ್ಷಾಂತ್ಯದಲ್ಲಿ ರೂ. 3000 ಕೋಟಿಗೂ ಮೀರಬಹುದು ಎಂದು ಕೆಲವು ಗಣ್ಯ ಅರ್ಥಶಾಸ್ತ್ರಜ್ಞರು ಈಗಾಗಲೇ ಎಚ್ಚರಿಸಿದ್ದಾರೆ. ಕಳೆದ ವರ್ಷದ ಮುಂಗಡಪತ್ರದಲ್ಲಿ ರೂ. 1445 ಕೋಟಿ ಕೊರತೆ ಎಂದು ಸೂಚಿಸಲಾಗಿದ್ದರೂ, ವರ್ಷಾಂತ್ಯದಲ್ಲಿ ಕೊರತೆಯು 1975 ಕೋಟಿಯಷ್ಟಾಗಿತ್ತು. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ (IMF)ಯಿಂದ ತಾತ್ಕಾಲಿಕವಾಗಿ ಪಡೆದ ರೂ. 810 ಕೋಟಿ ನೆರವನ್ನೂ ಕೂಡಿಸಿದರೆ, ಕಳೆದ ವರ್ಷದ ಒಟ್ಟು ಕೊರತೆ ರೂ. 2785 ಕೋಟಿ! ಜನತಾ–ಲೋಕದಳ ಆಳ್ವಿಕೆಯ 1979–80ರಲ್ಲಿ ಕೊರತೆ ರೂ. 2700 ಕೋಟಿ. 1980-81ರ ಮುಂಗಡಪತ್ರದಲ್ಲಿ ಸೂಚಿಸಿದುದಕ್ಕಿಂತ ಹೆಚ್ಚು ಕೊರತೆ ಉಂಟಾದರೆ ಅರ್ಥಮಂತ್ರಿ ಪದವಿಗೆ ರಾಜೀನಾಮೆ ನೀಡುವುದಾಗಿ ಆರ್. ವೆಂಕಟರಾಮನ್ ಹೇಳಿದ್ದರು. ಆದರೆ, ಕೊರತೆಯು ರೂ. 2785 ಕೋಟಿಗೆ ಮುಟ್ಟಿದ್ದು, ಮುಂದಿನ ವರ್ಷ ರೂ. 3000 ಕೋಟಿಯನ್ನೂ ಮೀರುವ ಸಂಭವವಿದೆ! ಮಂತ್ರಿ ಪದವಿಗೆ ಇನ್ನಷ್ಟೂ ಗಟ್ಟಿಯಾಗಿ ಅಂಟಿಕೊಂಡಿದ್ದಾರೆ.

ಆರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒಟ್ಟು 500 ಕೋಟಿ ಕೊರತೆ ಹಣ ಸೃಷ್ಟಿ ಎಂದು ನಿರೀಕ್ಷಿಸಿದ್ದರೂ, ಮೊದಲ ಎರಡೇ ವರ್ಷಗಳೊಳಗೆ ಈ ಮಿತಿಯನ್ನು ಮೀರುವ ಭಯವಿದೆ. ಇದಲ್ಲದೆ, ವಿದೇಶೀ ವ್ಯಾಪಾರದಲ್ಲಿ ಆಮದು ಹೆಚ್ಚಿ, ರಫ್ತು ಕಡಿಮೆಯಾಗಿ ಸಧ್ಯ ರೂ. 4000ಕೋಟಿ ಕೊರತೆ ಉಂಟಾಗಿದೆ.

ಗುತ್ತೇದಾರಿ ಬಂಡವಾಳಶಾಹಿಗಳಿಗೆ ಸಂಪೂರ್ಣ ಶರಣು :

ಬಡವರ ಬಂಧು ಇಂದಿರಾ ಸರಕಾರ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಸಂಪೂರ್ಣ ಶರಣು ಹೊಡೆದಿದೆ. ಉತ್ಪಾದನೆ ಹೆಚ್ಚಿಸಬೇಕು ಎಂಬ ನೆಪದಿಂದ, ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳು ಲಾಭ ಹೆಚ್ಚಿಸಲು, ಕಳ್ಳಸಂತೆ ವ್ಯಾಪಾರ ಮಾಡಲು, ತೆರಿಗೆ ತಪ್ಪಿಸಲು, ಕಾನೂನು ಬಾಹಿರವಾಗಿ ಗುಟ್ಟಾಗಿ ತಮ್ಮ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿದುದನ್ನು, ಇಂದಿರಾ ಸರ್ಕಾರ ಮಾನ್ಯ ಮಾಡಿದೆ! ಕೈಗಾರಿಕೋದ್ಯಮಗಳ ಆದಾಯದ ಮೇಲಿನ ಮೇಲ್ತೆರಿಗೆ(Surcharge)ಯ ದರವನ್ನು ಶೇ. 7.5ಯಿಂದ ಶೇ. 2.5ಗೆ ಇಳಿಸಿ ರೂ. 60 ಕೋಟಿ ಹೆಚ್ಚಿನ ಲಾಭ ಸಿಂಹಪಾಲು ಗುತ್ತೇದಾರಿ ಕೈಗಾರಿಕೆಗಳಿಗೆ ಸೇರುವಂತೆ ಮುಂಗಡ ಪತ್ರದಲ್ಲಿ ಅವಕಾಶ ಮಾಡಿಕೊಟ್ಟಿದೆ. ಮುಕ್ತ ಪ್ರದೇಶಗಳಲ್ಲಿನ (free zone) ಕೈಗಾರಿಕೆಗಳಿಗೆ ತೆರಿಗೆ ರದ್ದತಿ, ಹೊಸ ಕೈಗಾರಿಕೆಗಳಿಗೆ ತೆರಿಗೆ ರಜಾ ಅವಧಿ ಹಾಗೂ ಅಭಿವೃದ್ಧಿ ವೆಚ್ಚಗಳ ಮೇಲೆ ತೆರಿಗೆ ರಿಯಾಯಿತಿ, ಇತ್ಯಾದಿಗಳು ಹೆಚ್ಚಾಗಿ ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳ ಲಾಭಗಳಿಕೆಗೇ ಅನುಕೂಲವಾಗುವುವು. ಸಣ್ಣ ಕೈಗಾರಿಕೆಗಳ ಗರಿಷ್ಠ ಆಸ್ತಿ ಮೌಲ್ಯವನ್ನು ರೂ. 10 ಲಕ್ಷದಿಂದ ರೂ. 20ಲಕ್ಷಕ್ಕೆ ಏರಿಸಿದುದರಿಂದ, ಅವುಗಳಿಗೆ ನೀಡುವ ತೆರಿಗೆ ರಿಯಾಯಿತಿ ಮತ್ತಿತರ ಸಹಾಯ ಸೌಕರ್ಯಗಳ ಪ್ರಯೋಜನಗಳನ್ನು ಅಪ್ರತ್ಯಕ್ಷವಾಗಿ ಗುತ್ತೇದಾರಿ ಕೈಗಾರಿಕೆಗಳ ಏಜಂಟರುಗಳೇ ಪಡೆಯುವ ಸಾಧ್ಯತೆ ಇದೆ. ರಫ್ತು ಸಾಮಗ್ರಿಗಳ ಉತ್ಪಾದನೆಗೆ ನೀಡುವ ತೆರಿಗೆ ರಿಯಾಯಿತಿಯಿಂದಲೂ ಗುತ್ತೇದಾರಿ ಕೈಗಾರಿಕೆಗಳಿಗೇ ಹೆಚ್ಚು ಲಾಭ.

ಫ್ಯಾನ್, ಕುಕ್ಕರ್, ಗಾಜುಸಾಮಗ್ರಿಗಳು, ಬಣ್ಣಗಳು, ಮೊಸ್ಯಾಕ್ ಹಂಚುಗಳು, ಪಿಂಗಾಣಿ ವಸ್ತುಗಳು ಇತ್ಯಾದಿ 14 ಕೈಗಾರಿಕಾ ವಸ್ತುಗಳನ್ನು ಉತ್ಪಾದಿಸುವ ಸಂಸ್ಥೆಗಳಿಗೆ ಅಪ್ರತ್ಯಕ್ಷ ತೆರಿಗೆಯಲ್ಲಿ ರಿಯಾಯಿತಿ ಕೊಡಲಾಗಿದೆ. ಹೆಚ್ಚಾಗಿ ಈ ಸಾಮಗ್ರಿಗಳು ಮಧ್ಯಮ ಹಾಗೂ ಶ್ರೀಮಂತವರ್ಗದವರು ಬಳಸುವವುಗಳು. ಮೇಲಾಗಿ, ಮುಂಗಡಪತ್ರದಲ್ಲಿ ನೀಡಿದ ತೆರಿಗೆ ರಿಯಾಯಿತಿ ಅಂತಿಮವಾಗಿ ಗ್ರಾಹಕರಿಗೆ ಸಿಗುವ ಭರವಸೆ ಇಲ್ಲ. ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳು ತೆರಿಗೆ ರಿಯಾಯಿತಿಯಿಂದ ಹೆಚ್ಚು ಲಾಭಗಿಟ್ಟಿಸುವುವು, ಅಷ್ಟೆ.

ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಸ್ವಾಗತ :

ನಮ್ಮ ದೇಶದ ಜಲ ಹಾಗೂ ನೆಲ ಪ್ರದೇಶಗಳಲ್ಲಿ ತೈಲ ಶೋಧನೆಗಾಗಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ತೆರಿಗೆ ರಿಯಾಯಿತಿಯೂ ಸೇರಿದಂತೆ ವಿಶೇಷ ಸೌಲಭ್ಯಗಳನ್ನು ನೀಡಲಾಗಿದೆ. ಅವುಗಳು ನಮ್ಮ ದೇಶದಲ್ಲಿ ತೈಲ ಶೋಧನೆಮಾಡಿದರೆ, ಅಂತಹ ತೈಲದಲ್ಲಿ ತಾವೂ ಪಾಲು ಪಡೆಯುವುವು. ಅರ್ಥಾತ್, ನಮ್ಮ ದೇಶದ ತೈಲ ಸಂಪತ್ತಿನಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು ಪಾಲು ಪಡೆಯುವುವು! ಇಂತಹ ದೇಶದ್ರೋಹಿ ಒಪ್ಪಂದ ಬೇರೆ ಯಾವ ದೇಶದಲ್ಲಿಯೂ ನಡೆದಿರಲಾರದು. ನಮ್ಮ ದೇಶದಲ್ಲಿ ಈಗ ಕೆಲವು ದಶಕಗಳಿಂದ ONGC ಮತ್ತು OIL ಈ ಎರಡು ಸಂಸ್ಥೆಗಳು ತೈಲ ಶೋಧನೆಯಲ್ಲಿ ಗಣನೀಯ ಸಾಧನೆಗಳಿಸಿವೆ. ಆದರೂ ಇವುಗಳನ್ನು ಅಲಕ್ಷಿಸಿ, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮೊರೆಹೋಗಿರುವುದು ರಾಷ್ಟ್ರೀಯ ಅವಮಾನವೇ ಸರಿ. ವಿದೇಶಿ ಬಂಡವಾಳದ, ಬಹುರಾಷ್ಟ್ರೀಯ ಸಂಸ್ಥೆಗಳ ಪ್ರಭಾವ ನಮ್ಮ ರಾಜಕೀಯ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಹೆಚ್ಚುತ್ತಿದ್ದು, ನಮ್ಮ ಸ್ವಾತಂತ್ರ್ಯ, ಸ್ವಾವಲಂಬನೆಗೆ ಗಂಡಾಂತರ ಉಂಟಾಗಿದೆ.

ಭೂಮಾಲಕರಿಗೆ, ಶ್ರೀಮಂತ ರೈತರಿಗೆ ಕರಭಾರ ಇಲ್ಲ :

ದೇಶದ ಒಟ್ಟು ವ್ಯವಸಾಯ ಭೂಮಿಯಲ್ಲಿ ಶೇ. 31ರಷ್ಟು ಕೇವಲ 4ರಷ್ಟು ದೊಡ್ಡ ಹಿಡುವಳಿದಾರರ ವಶದಲ್ಲಿ ಇದೆ. ಇವರ ಹಿಡುವಳಿಯು 25 ಎಕರೆಗಳಿಗಿಂತಲೂ ಹೆಚ್ಚಿದೆ. ಇಂತಹ ಶ್ರೀಮಂತ ಹಿಡುವಳಿದಾರರ ಸಂಖ್ಯೆ 27,66,000 ಎಂದು ಅಂದಾಜುಮಾಡಲಾಗಿದೆ. ಮೂರು ದಶಕಗಳಿಂದ ಸರಕಾರ ಕೃಷಿಯೋಜನೆಗೆ ವಿನಿಯೋಗಿಸುವ ಹಣದ ಪ್ರಯೋಜನಗಳನ್ನು ಹೆಚ್ಚಾಗಿ ಈ ವರ್ಗ ಪಡೆಯುತ್ತಿದ್ದಗೂ, ಆದಾಯ ತೆರಿಗೆಯಿಂದ ಅವರನ್ನು ಇನ್ನೂ ಮುಕ್ತಗೊಳಿಸಲಾಗಿದೆ. ಅವರಿಗೆ ಕರಭಾರವಿಲ್ಲ. ದೊಡ್ಡ ಭೂಮಾಲಕರು ಶ್ರೀಮಂತ ರೈತರು ಹಸಿರು ಕ್ರಾಂತಿಯ ಲಾಭವನ್ನು ತಾವೇ ಅನುಭವಿಸುತ್ತಿದ್ದಾರೆ.

ರಕ್ಷಣಾವೆಚ್ಚದಲ್ಲಿ ಹೆಚ್ಚಳ :

ಕೇಂದ್ರ ಸರ್ಕಾರದ ಒಟ್ಟು ವೆಚ್ಚವು 1980–81ರಿಂದ 1981-82ರ ಅವಧಿಯಲ್ಲಿ ರೂ. 22808 ಕೋಟಿಯಿಂದ ರೂ. 24871 ಕೋಟಿಗೆ ಏರಲಿದೆ. ಇದರಲ್ಲಿ ಆರ್ಥಿಕ ಯೋಜನೆಗೆ ಸಂಬಂಧವಿಲ್ಲದ, ಹೆಚ್ಚಾಗಿ ಆಡಳಿತ, ರಕ್ಷಣೆ ಇತ್ಯಾದಿ ಅನುತ್ಪಾದಿತ ವಿಷಯಗಳಿಗೆ ಆಗುವ ವೆಚ್ಚವು ರೂ. 13736 ಕೋಟಿಯಿಂದ ರೂ. 15,100 ಕೋಟಿಗೆ ಏರಲಿದೆ. ರಕ್ಷಣಾ ವೆಚ್ಚಒಂದೇ ರೂ. 3200 ಕೋಟಿಯಿಂದ ರೂ. 4670 ಕೋಟಿಗೆ ಏರಲಿದೆ! ಒಂದು ದಶಕದ ಹಿಂದೆ 1970-71ರಲ್ಲಿ ವಾರ್ಷಿಕ ರಕ್ಷಣಾ ವೆಚ್ಚವು ರೂ. 1200 ಕೋಟಿಯಷ್ಟಾಗಿತ್ತು. ಜನಕೋಟಿಯಿಂದ ಸರ್ಕಾರ ಸಂಗ್ರಹಿಸುತ್ತಿರುವ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ತೆರಿಗೆಗಳ ಬಹುಪಾಲು ಆಡಳಿತ, ರಕ್ಷಣೆ, ವಾಣಿಜ್ಯ, ವ್ಯವಸಾಯ, ಕೈಗಾರಿಕೆಗಳಿಗೆ ಸಹಾಯಧನ, ಇತ್ಯಾದಿ ಅನುತ್ಪಾದಿತ ವಿಷಯಗಳಿಗೇ ವಿನಿಯೋಗವಾಗುವುದು. ಪರಿಣಾಮ ಉತ್ಪಾದನೆಯಲ್ಲಿ ಸ್ಥಗಿತ, ಬೆಲೆ ಏರಿಕೆ, ಹಣದುಬ್ಬರ.

ಹಣದುಬ್ಬರ ಮತ್ತು ಬೆಲೆಏರಿಕೆ :

ಒಟ್ಟು ತೆರಿಗೆ ಸಂಗ್ರಹದಲ್ಲಿ ಶೇ.75 ರಷ್ಟು ಅಪ್ರತ್ಯಕ್ಷ ತೆರಿಗೆ, ಮೇಲೆ ಭಾರೀ ಪ್ರಮಾಣದಲ್ಲಿ ಕೊರತೆ ಹಣ ಸೃಷ್ಟಿ, ವಿದೇಶವ್ಯಾಪಾರದಲ್ಲಿ ಕೊರತೆ, ದೇಶವಿದೇಶಗಳಿಂದ ಸಾಲ, ಬಂಡವಾಳಶಾಹಿಗಳಿಗೆ ಮತ್ತು ಭೂಮಾಲಕರಿಗೆ ಹಾಗೂ ಶ್ರೀಮಂತ ರೈತರಿಗೆ ಕಡಿಮೆ ಕರಭಾರ ಹಾಗೂ ಅಧಿಕ ಲಾಭ, ಈ ಅಂಶಗಳನ್ನು ಕೂಡಿರುವ ಮುಂಗಡ ಪತ್ರದಿಂದ ಬೆಲೆಗಳು ಈ ವರ್ಷ ಇನ್ನಷ್ಟೂ ಏರಿ ಹಣದುಬ್ಬರದ ಪರಿಸ್ಥಿತಿ ತೀವ್ರವಾಗಲಿದೆ. ಖಾಸಗೀ ರಂಗದಲ್ಲಿ ಉಂಟಾಗುವ ಲಾಭ, ಸಂಪನ್ಮೂಲಗಳಾಗಲೀ, ಸರಕಾರಿ ರಂಗದಲ್ಲಿ ವಿವಿಧ ರೀತಿಯಲ್ಲಿ ಸಂಗ್ರಹಿಸುವ ಸಂಪನ್ಮೂಲಗಳಾಗಲೀ, ಅಂತಿಮವಾಗಿ ಅನುತ್ಪಾದಿತ ವಿಷಯಗಳಿಗೇ ಹೆಚ್ಚು ವ್ಯಯವಾಗುವುದರಿಂದ, ನಿರೀಕ್ಷಿಸಿದಷ್ಟು ಉತ್ಪಾದನೆ ಆಗದೆ, ಅರ್ಥವ್ಯವಸ್ಥೆಯಲ್ಲಿ ಹಣದ ಸಂಚಾರ ಹೆಚ್ಚಾಗಿ, ಕಪ್ಪು ಹಣದ ಕೂಡಿಕೆ ಹೆಚ್ಚಿ, ಉತ್ಪಾದನೆ ಸ್ಥಗಿತಗೊಂಡು ಬೆಲೆಗಳು ಇನ್ನಷ್ಟು ಏರುವುವು. ಹಣದುಬ್ಬರದ ಪರಿಸ್ಥಿತಿ ಮುಂದುವ

(7ನೇ ಪುಟ ನೋಡಿ)

ಮಹಿಳೆಯನ್ನು ಕುರಿತು

ಆರ್. ಪೂರ್ಣಿಮಾ

(ಹಿಂದಿನ ಸಂಚಿಕೆಯಿಂದ)

ತೀರ ಇತ್ತೀಚೆಗೆ, 19ನೇ ಶತಮಾನದಲ್ಲಿ ಕೂಡ ಬ್ರಾಹ್ಮಣನೊಬ್ಬನು ತನ್ನ 'ಅವಸರ ನಿಮಿತ್ತವಾಗಿ' ಹೊಲೆಯಾಳಿನ ಹೆಂಡತಿಯನ್ನು ಬುದ್ಧಿವಂತರು ಕಟ್ಟಿದ 'ಕ್ರಯ'ಕ್ಕೆ ಮಾರಿದ ಉಲ್ಲೇಖ ಸಿಗುತ್ತದೆ.

ಯಾವ ಭಾಷೆಯ ಯಾವ ಸಾಹಿತ್ಯದ ಆಂದೋಲನ, ಚಳುವಳಿಗಳೂ ಕೂಡ ಇಂಥ ತೀರ ನಿಕಟವಾದ ಸಾಮಾಜಿಕ ಘಟಕದ ಬಗ್ಗೆ ಗಂಭೀರವಾಗಿ ಆಲೋಚಿಸಿಲ್ಲ. ಎಲ್ಲ ಸಾಹಿತಿಗಳೂ ಪರಂಪರಾಗತವಾದ ಸಾಮಾಜಿಕ ಪದ್ಧತಿಗಳನ್ನು ಒಪ್ಪಿಕೊಂಡು ಅದನ್ನೇ ವೈಭವಿಸಿ ಹಾಡುತ್ತಾ ಹೊಣೆ ತಪ್ಪಿಸಿಕೊಂಡರು. ಇಡೀ ಸಾಹಿತ್ಯಕ್ಕೆ ಹೆಣ್ಣು ಕಾಣಿಸಿಕೊಳ್ಳುವುದು ವರ್ಣನಾರ್ಹವಾದ ವಸ್ತುವಾಗಷ್ಟೆ. ಎಲ್ಲ ಸಾಹಿತ್ಯದ ಎಲ್ಲ ಕವಿಗಳೂ ಹೆಣ್ಣನ್ನು ವರ್ಣಿಸಿ ದಣಿದಿದ್ದಾರೆ. ಸಾಹಿತ್ಯದಲ್ಲಿ ಹೆಣ್ಣು ಕಾಣಿಸಿಕೊಳ್ಳುವುದು ಮನುಷ್ಯನ ಭಾವನಾತ್ಮಕ ಸಮಯಗಳಲ್ಲಿ ಎಂದರೆ ಪ್ರೇಮಪ್ರಣಯ ವಾತ್ಸಲ್ಯ ಮುಂತಾದ ಸನ್ನಿವೇಶಗಳಲ್ಲಷ್ಟೆ. ತಾಯಿಯರ ಬಗ್ಗೆ ಹೇಳುವಾಗಲಂತೂ ಕವಿಗಳ ಹೃದಯ ಕರಗಿಬಿಡುತ್ತದೆ. ಇಷ್ಟುಬಿಟ್ಟರೆ ಹೆಣ್ಣು ಇನ್ನಾವ ವಲಯದಲ್ಲೂ ಬದುಕಿಲ್ಲ. ಹೆಣ್ಣಿನ ಬೌದ್ಧಿಕ, ಮಾನಸಿಕ ವಲಯಗಳನ್ನು ಯಾವ ಕವಿಯೂ ಗುರುತಿಸಿಲ್ಲ. ಅವಳ ಬಾಹ್ಯ ಸೌಂದರ್ಯವಷ್ಟನ್ನೇ ವರ್ಣಿಸಿ ಮೆರೆಸುವ ಚಪಲ ಯಾವ ಕವಿಯನ್ನೂ ಬಿಟ್ಟಿಲ್ಲ. ಪ್ರಾಚೀನ ಕವಿಗಳ ಗಮನವೆಲ್ಲ ಅರಮನೆಯ ಸ್ತ್ರೀಯರ ಕಡೆಗಷ್ಟೆ ಇದೆ. ವ್ಯಕ್ತಿತ್ವ ಏನನ್ನಾದರೂ ಸಾಧಿಸಬೇಕಾದರೆ ಹೆಣ್ಣಿನಿಂದ ದೂರವಿರಬೇಕು ಎಂಬ ಸುಳ್ಳು ಘೋಷಣೆಯನ್ನು ಎಲ್ಲ ಸಾಹಿತ್ಯದಲ್ಲೂ ಕಾಣಬಹುದು. "ಹೆಣ್ಣು ಸಕಲ ಹೆಗ್ಗುರಿಗಳ ಗೋರಿ" ಎನ್ನುವಂಥ ಅಪಾಯಕಾರಿ ದನಿ ಜನಾಂಗದ ಕಣ್ಣು ತೆರೆಸಿದ ಕವಿಗಳಲ್ಲೂ ಕೇಳಬಂದಿದೆ. ಹೆಣ್ಣನ್ನು ಸಾಮಾಜಿಕ ಬದಲಾವಣೆಯ ಚೌಕಟ್ಟಿನಲ್ಲಿಟ್ಟು ಅರ್ಥೈಸುವುದು ನಮ್ಮ ಸಾಹಿತಿಗಳಿಗೆ ತಿಳಿದಿಲ್ಲ ಎನ್ನುವುದು ಇದರ ಅರ್ಥವಷ್ಟೆ.

ಭಾರತದಲ್ಲಿ ಹುಟ್ಟಿ ಬೆಳೆದ ಯಾವ ಧರ್ಮವೂ ಯಾವ ಮತವೂ ಹೆಣ್ಣಿನ ಬಗ್ಗೆ ಭಿನ್ನವಾಗಿ ಆಲೋಚಿಸುವುದನ್ನು ಕಲಿಸಲಿಲ್ಲ. ಎಲ್ಲ ಧರ್ಮಗಳೂ ಹೆಣ್ಣನ್ನು ಮೋಹ, ಮಾಯೆ ಎಂದು ದೂರವಿರಿಸಿದರೂ, ನಾಲ್ಕು ವರ್ಣಾಶ್ರಮ ಧರ್ಮಗಳೂ ಒಂದಲ್ಲ ಒಂದು ಬಗೆಯಲ್ಲಿ ಸಂಸಾರಕ್ಕೆ ಅಂಟಿಕೊಂಡಿರುವುದನ್ನೆ ಹೇಳುತ್ತವೆ. ಬುದ್ಧನೂ ತನ್ನ ಸಂಘಕ್ಕೆ ಸ್ತ್ರೀಯರನ್ನು ಸೇರಿಸಿಕೊಳ್ಳಲು ಪ್ರಾರಂಭದಲ್ಲಿ ಅನುಮಾನಿಸಿದ. ಧರ್ಮದ ಅನುಯಾಯಿಗಳಾಗಲು, ಅದನ್ನು ಆಚರಿಸಲು, ವಿರಾಗಿಣಿಯರಾಗಲು ಅವಕಾಶವಿತ್ತೇ ಹೊರತು ಧರ್ಮದ ನಿರ್ದಿಷ್ಟ ಕ್ರಿಯೆಯಲ್ಲಿ ಸ್ತ್ರೀಯರಿಗೆ ಭಾಗವಿರಲಿಲ್ಲ. ಜೈನಧರ್ಮದಲ್ಲಿ ಹೆಣ್ಣುಜೀವ ಮುಕ್ತಿಪಡೆಯಬೇಕಾದರೆ ಅದು ಮತ್ತೆ ಗಂಡಾಗಿ ಹುಟ್ಟಬೇಕು. ವೈಷ್ಣವಧರ್ಮ ಹೆಣ್ಣನ್ನು ಎಲ್ಲರಿಗಿಂತ ಕೀಳಾಗಿ ಕಾಣುತ್ತದೆ. ಹೆಣ್ಣನ್ನು ಬಾಹ್ಯ ವಿಷಯಗಳಿಂದ ಕಳಚಿ, ಅವಳಿಗೆ ಬೌದ್ಧಿಕವಾಗಿ ಮನ್ನಣೆ ನೀಡಿ, ಕ್ರಿಯಾಶಕ್ತಿಯನ್ನು ಗುರುತಿಸಿದ್ದು ಬಸವಣ್ಣನವರ ಕಾಲದಲ್ಲಿ ಮಾತ್ರ. ಮಿಕ್ಕ ಕಾರಣಗಳೇನೇ ಇರಲಿ, ಮಹದೇವಿಯಕ್ಕನನ್ನು ಶರಣೆಯೆಂದಷ್ಟೇ ಅಲ್ಲ, ಅನುಭವಮಂಟಪದ ಪ್ರಮುಖ ಅಂಗವನ್ನಾಗಿ ಕೂಡ ಸ್ವೀಕರಿಸಿದ್ದು ಮಹತ್ವದ ಅಂಶ. ಅನಾಮಧೇಯ ಹೆಂಗಸರಿಗೂ ಅಲ್ಲಿ ಶರಣೆಯರಾಗಲು, ವಚನಕಾರ್ತಿಯರಾಗಲು ಅವಕಾಶವಿತ್ತು. ಆದರೆ ಈ ಸುಧಾರಣೆ ಕೇವಲ ವ್ಯಕ್ತಿಗತವಾಗಿ ಮಾತ್ರ ಉಳಿದು ಮುಂದೆ ವೀರಶೈವ ಸಮಾಜದಲ್ಲಿ ಯಾವ ಬದಲಾವಣೆಯನ್ನೂ ತರಲಿಲ್ಲ ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ವೀರಶೈವ ಸಮಾಜವೂ ಹೆಣ್ಣನ್ನು ಪರಂಪರಾಗತ ರೀತಿಯಲ್ಲೇ ನಡೆಸಿಕೊಂಡು ಬಂದಿತು. ಆರ್ಥಿಕ ವ್ಯವಸ್ಥೆಯಿಂದ ದೂರವುಳಿದ ಒಂದು ಸಾಮಾಜಿಕ ಸುಧಾರಣೆಯ ಮಿತಿ ಎಷ್ಟೆಂಬುದು ವ್ಯಕ್ತವಾಗುತ್ತದೆ. ಧರ್ಮದ ಸಾಮಾಜಿಕ ಹೊಣೆಗಾರಿಕೆಯನ್ನು ಈ ಅಂಶಗಳು ನಿರ್ಧರಿಸುತ್ತವೆ. ನಿಜವಾದ ಇತಿಹಾಸಕಾರ, ನಿಜವಾದ ಸಮಾಜಶಾಸ್ತ್ರಜ್ಞ ಒಂದು ಧಾರ್ಮಿಕ ಚಳುವಳಿಯನ್ನು ಪ್ರಶ್ನಿಸಬೇಕಾಗಿರುವುದು ಇಂಥ ಘಟ್ಟಗಳಲ್ಲಿಯೇ.

ವ್ಯವಸ್ಥೆಯ ತಳಹದಿಯಾದ ಆರ್ಥಿಕ ತತ್ವವು ಸಾಮಾಜಿಕ ಸಂಬಂಧಗಳನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎಂಬುದು ಈಗ ಸ್ಪಷ್ಟವಾಗುತ್ತದೆ. ದೇಶದಲ್ಲಿನ ಶೇಕಡಾ ಮೂವತ್ತು ವಿದ್ಯಾವಂತ ಸಂಖ್ಯೆಯಲ್ಲಿ ತೀರ ಕಡಿಮೆ ಪ್ರಮಾಣದಲ್ಲಿ ಹೆಂಗಸರಿದ್ದಾರೆ. ಹೆಣ್ಣಿನ ವಿಮೋಚನೆಗೆ ವಿದ್ಯಾಭ್ಯಾಸ ಮೊದಲ ಮೆಟ್ಟಿಲು ಎಂದು ಹೇಳಲಾಗುತ್ತದೆ. ಆದರೆ ಈ ವಿದ್ಯಾಭ್ಯಾಸದ ಗುರಿ ಯಾವುದು, ಶಿಕ್ಷಣದ ಹೆಸರಿನಲ್ಲಿ ಯಾವುದನ್ನು ತುಂಬಲಾಗುತ್ತಿದೆ ಎಂಬುದನ್ನು ಗಮನಿಸಬೇಕು. ಕೇವಲ ಅಕ್ಷರ ಜ್ಞಾನ ಏನನ್ನೂ ಸಾಧಿಸುವುದಿಲ್ಲ. ಸುಧಾರಣೆಯ ಹೆಸರಿನಲ್ಲಿ ಈಗ ಹೆಣ್ಣಿಗೆ ವಿದ್ಯಾಭ್ಯಾಸ, ಉದ್ಯೋಗಾವಕಾಶಗಳನ್ನು ಕೊಡಲಾಗುತ್ತಿದೆ. ಇದರ ನಿಜವಾದ ಉದ್ದೇಶ ಅವಳ ವಿಮೋಚನೆಯಲ್ಲ, ಅವಳನ್ನೂ ಸುಶಿಕ್ಷಿತ ಕಾರ್ಮಿಕಳನ್ನಾಗಿ ತಯಾರು ಮಾಡುವುದು. ಮೊದಲು ಮನೆಯೊಳಗೆ ಇದ್ದು ಶೋಷಣೆ ಅನುಭವಿಸುತ್ತಿದ್ದ ಹೆಣ್ಣು ಈಗ ಹೊರಗೆ ಬಂದು ಆರ್ಥಿಕ ಶೋಷಣೆಗೂ ಒಳಗಾಗುತ್ತಿದ್ದಾಳೆ. ಈ ಇಬ್ಬಂದಿ ಶೋಷಣೆಯಿಂದ ಅವಳ ಸ್ಥಾನ ಸುಧಾರಿಸುವುದಿಲ್ಲ. ದುಡಿಯುವ ಎಲ್ಲ ಹೆಂಗಸರಿಗೂ ಆರ್ಥಿಕ ಸ್ವಾತಂತ್ರ್ಯ ಇದೆಯೆಂದು ಭಾವಿಸುವುದು ತಪ್ಪು. ಅಲ್ಲದೆ ಮನೆಯೊಳಗಿನ ಅವಳ ದೈಹಿಕ ಶ್ರಮ ಕುಟುಂಬದ ಅಥವಾ ಸಮಾಜದ ಆರ್ಥಿಕ ವಲಯದೊಳಗೆ ನೇರವಾಗಿ ಬರುವುದಿಲ್ಲ. ಸಂಭಾವನೆಯಿಲ್ಲದ ಯಾವ ಶ್ರಮವೂ ಶ್ರಮವೇ ಅಲ್ಲ ಎಂದು ಆಧುನಿಕ ಅರ್ಥವಿಜ್ಞಾನ ಶ್ರಮವನ್ನು ವಿವರಿಸುತ್ತದೆ. ಮನೆಯ ಸುಖ ಸಂತೋಷಗಳು, ಮನೆಯ ಸದಸ್ಯರ ಕ್ಷೇಮ ಆರೋಗ್ಯಗಳೇ ಅವಳ ಶ್ರಮಕ್ಕೆ ಸಂಭಾವನೆ ಎಂದು ಹಿರಿಯರು ತಲೆಸವರಿದ್ದಾರೆ. (ತೀರ ಮುಂದುವರಿದ ಸಮಾಜವಾದಿ ದೇಶಗಳಲ್ಲಿ ಕೂಡ ಮನೆ ಕೆಲಸವನ್ನು 'ವರ್ಕ್ ಪಾಯಿಂಟ್'ಗಳಾಗಿ ಗಣಿಸುತ್ತಿಲ್ಲ.) ಅಲ್ಲದೆ, ವಿದ್ಯಾವಂತ, ಉದ್ಯೋಗಸ್ಥ ಮಹಿಳೆಯರೂ ಕೂಡ ರಾಜಕೀಯ, ಸಾಮಾಜಿಕ ಕ್ಷೇತ್ರಗಳು ತಮ್ಮದಲ್ಲವೆಂದು ಭಾವಿಸುತ್ತಾರೆ. ಸಂಸಾರದ ಜವಾಬ್ದಾರಿ ತಮ್ಮ ನೈತಿಕ ಹೊಣೆಯೆಂದು ತಿಳಿಯುತ್ತಾರೆ. ಇಷ್ಟು ಬಿಟ್ಟರೆ, ಅವರನ್ನು ದಾರಿತಪ್ಪಿಸುವ ಹೇರಳವಾದ ವಿಷಯಗಳು ಅವರ ಆಲೋಚನೆಯನ್ನು ಕಸಿಯುತ್ತವೆ. ಆರ್ಥಿಕವಾಗಿ ಗಳಿಸುವ ಶಕ್ತಿ ಈಗ ಬಂದಿದ್ದರೂ ಪರಂಪರಾಗತವಾದ ಆಸಕ್ತಿಗಳನ್ನು ಮಹಿಳೆಯರು ಬಿಟ್ಟುಕೊಟ್ಟಿಲ್ಲ. ಅಂತರ್ಗತವಾಗಿ ಹೆಣ್ಣು ಏನೂ ಬದಲಾಗಿಲ್ಲ. ಸಂಸ್ಕೃತಿಯ ರಕ್ಷಕಳು ನಾನೇ ಎಂದು ಹೆಣ್ಣು ಭಾವಿಸುತ್ತಾಳೆ; ಅವಳಿಗೆ ಹಾಗೇ ಹೇಳಲಾಗುತ್ತದೆ. ಎಲ್ಲೋ ಒಂದೆರಡು ಉದಾಹರಣೆಗಳನ್ನು ತೋರಿಸಿ ಮಹಿಳೆಯ ಮುನ್ನಡೆ ಆಗಿದೆಯೆಂದು ಭಾವಿಸುವುದು ತಪ್ಪಾಗುತ್ತದೆ. ಆ ಕ್ಷೇತ್ರಗಳಲ್ಲಿ ಮುನ್ನಡೆದಿರುವ ಸ್ತ್ರೀಯರು ಯಾವ ವರ್ಗವನ್ನು ಯಾವ ಉದ್ದೇಶವನ್ನು ಪ್ರತಿನಿಧಿಸುತ್ತಾರೆ ಎಂಬುದನ್ನು ಗಮನಿಸಬೇಕು.

ಉತ್ಪಾದನೆಯಲ್ಲಿ ಸ್ತ್ರೀಯರೂ ಭಾಗವಹಿಸಿದರೆ ಅವರು ಸ್ವತಂತ್ರರಾಗಿ ವಿಮೋಚನೆಪಡೆಯುತ್ತಾರೆ ಎನ್ನುವ ಮಾತು ಕೂಡ ಈಗ ಸುಳ್ಳಾಗಿದೆ. ಮೂಲಭೂತವಾದ ಆರ್ಥಿಕ ತಳಹದಿಯ ಬಗ್ಗೆ ಗಮನಹರಿಸದೆ, ಮೇಲು ಪದರದಲ್ಲಿ ಸುಧಾರಣೆಯನ್ನು ತರಬಯಸುವುದು ಅವೈಜ್ಞಾನಿಕವೂ, ವಿಫಲವೂ ಆಗುತ್ತದೆ. ಈ ವ್ಯವಸ್ಥೆಯಲ್ಲೇ ಸ್ತ್ರೀಯರ ಸ್ಥಾನಮಾನಗಳನ್ನು ಸುಧಾರಿಸಲು ಯೋಜನೆಗಳನ್ನು ಸೂಚಿಸುವ ಸಮಾಜಶಾಸ್ತ್ರಜ್ಞರು, ಆರ್ಥಿಕತಜ್ಞರು ಮೇಲಿನ ಸಂಗತಿಗಳನ್ನು ಗಮನಿಸುವುದು ಒಳ್ಳೆಯದು. ವೈಜ್ಞಾನಿಕವಾದ ತತ್ವದ ಆಧಾರವಿಲ್ಲದೆ ವಿಮೋಚನೆಮಾಡಲು ಹೊರಟ ಎಲ್ಲ ಸ್ತ್ರೀಚಳುವಳಿಗಳೂ ವಿಫಲವಾಗುವುದು ಆ ಕಾರಣದಿಂದಲೇ. ಈ ಸಂಗತಿಯನ್ನು ಗಮನಿಸದೆ ಪಾಶ್ಚಾತ್ಯ ದೇಶಗಳ ಚಳುವಳಿಯ ಮಾದರಿಯನ್ನನುಸರಿಸಿ ಸ್ತ್ರೀಸ್ವಾತಂತ್ರ್ಯ ಹೋರಾಟವನ್ನು ನಡೆಸುವುದು ಅಸಾಧುವಾಗುತ್ತದೆ. ಜಗತ್ತಿನ ಯಾವ ಮೂಲೆಯಲ್ಲಿ ಕ್ರಾಂತಿ ನಡೆದರೂ ಅದರ ಜತೆಗೇ ಸ್ತ್ರೀ ವಿಮೋಚನೆಯ ಸಮಸ್ಯೆಯೂ ಸೇರಿಕೊಂಡಿರುವುದನ್ನು ಗಮನಿಸಬಹುದು. ಇವು ಕ್ರಾಂತಿಯೊಳಗೆ ನಡೆಯಬೇಕಾದ ಕ್ರಾಂತಿ.

ಹೆಣ್ಣಿನ ಪರಂಪರೆಯನ್ನು ಗುರುತಿಸುವಾಗ ಅವಳ ಆಭರಣ, ವಸ್ತ್ರವಿನ್ಯಾಸಗಳ ಚರಿತ್ರೆಯನ್ನು ಬರೆಯದೆ, ಈ ಅಂಶಗಳನ್ನು ಗಮನಿಸುವುದು ಸೂಕ್ತವಾಗುತ್ತದೆ. ಹೆಣ್ಣಿನ ಸ್ಥಾನಮಾನಗಳನ್ನು ಕಲ್ಲಿನಲ್ಲಿ, ದೇವತೆಗಳ ಜಾತಕದಲ್ಲಿ ಹುಡುಕುವುದಕ್ಕಿಂತ ಅವಳು ತಳೆಯಬೇಕಾದ ನಿಲುವುಗಳ ಬಗ್ಗೆ ಮಾತನಾಡುವುದು ಅಗತ್ಯವಾಗುತ್ತದೆ. ಇದೆಲ್ಲಕ್ಕಿಂತ ಮುಖ್ಯವಾದುದು ಮಹಿಳೆಯರು ಬೆಳೆಸಿಕೊಳ್ಳಬೇಕಾದ ಜಾಗೃತ ರಾಜಕೀಯ ಪ್ರಜ್ಞೆ. ಮಹಿಳಾ ಸ್ವಾತಂತ್ರ್ಯ ಬೇರೆಯವರು ಕೊಡುವುದಕ್ಕಿಂತ ಹೆಚ್ಚಾಗಿ ತಾವೇ ಸಂಪಾದಿಸಿಕೊಳ್ಳುವಂಥದ್ದು. ವ್ಯವಸ್ಥೆಯ ಬಗ್ಗೆ ಮೊದಲ ಪ್ರತಿಭಟನೆ ಹೆಣ್ಣಿನದೇ ಆಗಿಬಿಟ್ಟರೆ ಅದರ ಬದಲಾವಣೆ ಹೆಚ್ಚು ದೂರ ಉಳಿಯುವುದಿಲ್ಲ. ಇದೆಲ್ಲವೂ ಇಂದಿನ ಹೆಣ್ಣು ಸಾಂಸಾರಿಕ ಆಸಕ್ತಿಗಳಲ್ಲಿ ಮುಳುಗಿರುವುದರಿಂದ ಹೊರಬರುವುದನ್ನು ಅವಲಂಬಿಸಿದೆ. ನೈಸರ್ಗಿಕ ಅಗತ್ಯಗಳಿಗೆ ಬಿಟ್ಟರೆ ಮಿಕ್ಕ ವೈಯಕ್ತಿಕ ಅವಲಂಬನೆಗಳಿಲ್ಲವಾಗಬೇಕಾದರೆ ಎಲ್ಲ ಉತ್ಪಾದನಾ ಮೂಲಗಳನ್ನೂ ಗಂಡು ಹೆಣ್ಣುಗಳ ಭೇದವಿಲ್ಲದೆ ಬಳಸಿಕೊಳ್ಳುವ ವ್ಯವಸ್ಥೆಯ ನಿರ್ಮಾಣವಾಗಬೇಕು. ಆಗ ಹೆಣ್ಣಿನ ಬಗ್ಗೆ ಇರುವ ಎಲ್ಲ ಭ್ರಾಮಕ ಕಲ್ಪನೆಗಳೂ ಕಳಚಿಕೊಳ್ಳುತ್ತವೆ. ಇದು ನನ್ನ ತಲೆಮಾರು ಅಗತ್ಯವಾಗಿ ಯೋಚಿಸಬೇಕಾಗಿರುವ ವಿಷಯಗಳಲ್ಲೊಂದು. (1975ರ ಲೇಖನ-'ಸಾಧನೆ' ಕೃಪೆಯಿಂದ)

(ಮುಗಿಯಿತು)

ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಭಾರೀ ಮತಪ್ರದರ್ಶನ

ಫೆಬ್ರವರಿ7ರಂದು ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ.ನ ಸಂಯುಕ್ತ ನೇತೃತ್ವದಲ್ಲಿ ಮುಂಬೈ ಚರ್ಚ್‌ಗೇಟ್‌ನಲ್ಲಿರುವ ಅಮೇರಿಕನ್ ಸೆಂಟರ್ ಎದುರು ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ಪ್ರತಿಭಟಿಸಿ ಭಾರಿ ಮತಪ್ರದರ್ಶನ ಮಾಡಿದರು.

ಎಲ್‌ಸಾಲ್ವಡೋರ್‌ನಲ್ಲಿ ಭೀಕರ ಹತ್ಯಾಕಾಂಡ ನಡೆಸುತ್ತಿರುವ ಜನವಿರೋಧಿ ಆಳ್ವಿಕೆಗೆ ಪೂರ್ಣ ಬೆಂಬಲ ಕೊಡುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಯ ನೀತಿಯನ್ನು ಪ್ರತಿಭಟಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಡಿಯೋಗೋರ್ಸಿಯಾ ಮತ್ತಿತರ ಕಡೆ ಮಿಲಿಟರಿ ಶಕ್ತಿ ಬಲವರ್ಧನೆ, ಅಸ್ಸಾಂ ಮತ್ತು ಈಶಾನ್ಯ ಭಾರತದಲ್ಲಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿರುವ ಸಿ.ಐ.ಎ.ನ ಕೈವಾಡ ಇವುಗಳ ಬಗ್ಗೆ ಜನರ ಗಮನಸೆಳೆಯಲು ಈ ಕಾರ್ಯಕ್ರಮ ಏರ್ಪಡಿಸಿತ್ತು.

ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ.ನ ಬ್ಯಾನರ್‌ಗಳಿಂದ ಮೆರವಣಿಗೆ ಆಕರ್ಷಕವಾಗಿತ್ತು. ಜೊತೆಗೆ ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ಬಯಲಿಗೆಳೆಯುವ ಸಾಂಕೇತಿಕ ಪ್ಲೆಕಾರ್ಡ್ಸ್‌ಗಳು ಮೆರವಣಿಗೆಯಲ್ಲಿ ಕಂಡುಬಂದವು. ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆಗಳು ಗಗನಮುಟ್ಟುತ್ತಿದ್ದವು. ಮಧ್ಯಾಹ್ನ 12 ಗಂಟೆಯಿಂದ 2 ಗಂಟೆಯವರೆಗೆ ನಡೆದ ಮತಪ್ರದರ್ಶನ ಸಾವಿರಾರು ಜನರ ಗಮನಸೆಳೆಯಿತು.

ಮತಪ್ರದರ್ಶನ ಅತ್ಯಂತ ಶಾಂತಿಯುತವಾಗಿದ್ದರೂ ಎರಡು ಟ್ರಕ್ ತುಂಬ ಪೋಲೀಸರು ಬಂದು ಪ್ರದರ್ಶನಕಾರರನ್ನು ಪ್ರಚೋದಿಸಲು ಯತ್ನಿಸಿದರು. ಮತಪ್ರದರ್ಶನ ಕಾರ್ಯಕ್ರಮದ ಮತ್ತೊಂದು ಗಮನಾರ್ಹ ಅಂಶವೆಂದರೆ ಎಸ್.ಎಫ್.ಐ. ಮತ್ತು ಸಾಂಸ್ಕೃತಿಕ ತಂಡವಾದ "ಜಾಗರ"ನವರು ಸಂಯುಕ್ತವಾಗಿ ಏರ್ಪಡಿಸಿದ್ದ ಬೀದಿ ನಾಟಕ. ಜನಜೀವನವನ್ನು ಅಸ್ತವ್ಯಸ್ತಗೊಳಿಸಿ ಪರಿಸ್ಥಿತಿಯನ್ನು ವಿಷಮಯ ಮಾಡುವ ಸಾಮ್ರಾಜ್ಯಶಾಹಿ ತಂತ್ರಗಳನ್ನು ನಾಟಕದಲ್ಲಿ ಬಯಲಿಗೆಳೆಯಲಾಯಿತು.

●

ಅಲೀಗಢ ಮುಸ್ಲಿಂ ವಿಶ್ವವಿದ್ಯಾನಿಲಯದಲ್ಲಿ

ಕೋಮುವಾದಿಗಳ ಹಾವಳಿ

ಅಲೀಗಢ ಮುಸ್ಲಿಂ ವಿಶ್ವವಿದ್ಯಾನಿಲಯ ಭಾರತದ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿರುವ ಸಂಸ್ಥೆ. ಬಹಳ ಹಿಂದೆ 1877ರಲ್ಲಿ ಸರ್ ಸೈಯದ್ ಅಹಮದ್ ಖಾನ್ ಎಂಬ ಮುಸ್ಲಿಂ ಸುಧಾರಕರು ಮಹಮ್ಮಡನ್ ಆ್ಯಂಗ್ಲೋ-ಓರಿಯೆಂಟಲ್ ಕಾಲೇಜ್ ಎಂಬ ಮಹಾ ವಿದ್ಯಾಲಯವನ್ನು ಸ್ಥಾಪಿಸಿದರು. 1920ರಲ್ಲಿ ಈ ಸಂಸ್ಥೆ ವಿಶ್ವವಿದ್ಯಾನಿಲಯದ ರೂಪ ಪಡೆಯಿತು. 19ನೇ ಶತಮಾನದ ಉತ್ತರಾರ್ಧದಲ್ಲಿ ಮುಸ್ಲಿಂ ಜನತೆಯಲ್ಲಿ ಬೇರುಬಿಟ್ಟಿದ್ದ ದೀರ್ಘಕಾಲದ ಜಡತ್ವವನ್ನು ನಿವಾರಿಸಿ, ಅವರ ಮನಸ್ಸಿನ ಮೇಲೆ, ಪ್ರಜ್ಞೆಯ ಮೇಲೆ ಸಂಕುಚಿತ ಬುದ್ಧಿಯ ಮೌಲ್ಯಗಳ ಹಿಡಿತವನ್ನು ತಪ್ಪಿಸಿ, ಅವರಲ್ಲಿ ಪಾಶ್ಚಿಮಾತ್ಯ ವಿಜ್ಞಾನ ಹಾಗೂ ತತ್ವಜ್ಞಾನದ ಬಗೆಗಿದ್ದ ಜುಗುಪ್ಸೆಯನ್ನು ಹೋಗಲಾಡಿಸುವ ಉದಾರ ಹಾಗೂ ವೈಜ್ಞಾನಿಕ ಶಿಕ್ಷಣ ಕೂಡಾ ಮುಸ್ಲಿಂ ಯುವಕರಿಗೆ ದೊರಕುವಂತೆ ಮಾಡುವುದು ಈ ಸಂಸ್ಥೆಯ ಸಂಸ್ಥಾಪಕರ ಮುಖ್ಯ ಉದ್ದೇಶವಾಗಿತ್ತು. ಯಾಕೆಂದರೆ ಮುಸ್ಲಿಂ ಯುವಕರು ಬದಲಾಗುತ್ತಿರುವ ಜನತ್ತಿನಲ್ಲಿ ಬದುಕುಳಿಯಲು ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡಲು ಇದು ಅಗತ್ಯ ಎಂಬುದು ಅವರ ಭಾವನೆಯಾಗಿತ್ತು. ಇಂತಹ ಉದಾತ್ತ ಭಾವನೆಯಿಂದ ಸ್ಥಾಪಿತವಾದ ಈ ವಿದ್ಯಾಕೇಂದ್ರದಲ್ಲಿ ಈಗ ಸಂಕುಚಿತ ಕೋಮುವಾದ ಪ್ರಭಾವಶಾಲಿಯಾಗಿರುವಂತೆ ಕಾಣುತ್ತದೆ. ಈ ವರ್ಷದ ಜನವರಿ 31ರಿಂದ ವಿಶ್ವವಿದ್ಯಾನಿಲಯ ಅನಿರ್ದಿಷ್ಟ ಕಾಲದವರೆಗೆ ಮುಚ್ಚಲ್ಪಟ್ಟಿದೆ.

ಪ್ರೊ॥ ಇರ್ಫಾನ್ ಹಬೀಬ್ ಪ್ರಖ್ಯಾತ ಇತಿಹಾಸತಜ್ಞರು. ಮೊಗಲ್ ಕಾಲದ ಕೃಷಿ ಪರಿಸ್ಥಿತಿ ಕುರಿತು ಇವರು ನಡೆಸಿರುವ ಅಧ್ಯಯನ ಈ ದಿಕ್ಕಿನಲ್ಲಿ ಹೊಸ ದಾರಿಯನ್ನು ತೋರಿಸಿಕೊಟ್ಟಿದೆ ಎಂದು ಹೇಳಲಾಗುತ್ತದೆ. 50 ವರ್ಷ ವಯಸ್ಸಿನ ಮೃದುಭಾಷಿ ಪ್ರೊ॥ ಹಬೀಬ್ 27 ವರ್ಷಗಳಿಂದ ಅಲೀಗಢ ಮುಸ್ಲಿಂ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದ ಅಧ್ಯಾಪಕರಾಗಿದ್ದಾರೆ. ಈಗ ಸಮಾಜ ವಿಜ್ಞಾನಗಳ ವಿಭಾಗದ ಮುಖ್ಯಸ್ಥರೂ ಆಗಿದ್ದಾರೆ. ತನ್ನ ಈ ಹುದ್ದೆಯನ್ನು ಪ್ರೊ॥ ಹಬೀಬ್ ತೆರವು ಮಾಡಬೇಕೆಂದು ಕೆಲವು ವಿದ್ಯಾರ್ಥಿನಾಯಕರು ಒತ್ತಾಯಿಸುತ್ತಿದ್ದರು. ಇದಕ್ಕಾಗಿ ಉಪಕುಲಪತಿಗಳ ಘೇರಾವೋ, ಅನಿರ್ದಿಷ್ಟ ಅವಧಿಯ ಮುಷ್ಕರ, ಸರದಿ ಉಪವಾಸ ಇತ್ಯಾದಿಗಳೆಲ್ಲಾ ನಡೆದು ಪರಿಣಾಮವಾಗಿ ವಿಶ್ವವಿದ್ಯಾನಿಲಯ ಮುಚ್ಚಲ್ಪಟ್ಟಿತು.

ಚಳುವಳಿಯ ಬೇಡಿಕೆಗಳು :

ಪ್ರೊ॥ ಹಬೀಬ್‌ರ ವಿರುದ್ಧ ವಿದ್ಯಾರ್ಥಿಗಳು ಚಳವಳಿ ನಡೆಸಲು ಕಾರಣವೇನು? ಜನವರಿ 13ರಂದು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗೆ ಕೊಟ್ಟ ಒಂದು ಸಂದರ್ಶನದಲ್ಲಿ ಪ್ರೊ॥ ಹಬೀಬ್ ವಿಶ್ವವಿದ್ಯಾನಿಲಯ ಆಡಳಿತದ ಲೋಪದೋಷಗಳ ಬಗ್ಗೆ ಹೇಳಿ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ತಂದಿದ್ದಾರೆ ಎಂಬುದು ವಿದ್ಯಾರ್ಥಿಗಳ ಆಪಾದನೆ. ಅದಕ್ಕಾಗಿ ಅವರು ಸಮಾಜವಿಜ್ಞಾನಗಳ ವಿಭಾಗದ ಮುಖ್ಯಸ್ಥರ ಸ್ಥಾನ ತೆರವು ಮಾಡಬೇಕೆಂದು ಅವರಬೇಡಿಕೆ. ಆದರೆ ಅಲೀಗಢದ ಕಳೆದ 3-4 ತಿಂಗಳ ವಿದ್ಯಮಾನಗಳನ್ನು ಗಮನಿಸಿದವರಿಗೆ ಇದು ಕೇವಲ ತೋರಿಕೆಯ ಕಾರಣವೆಂಬುದು ಸ್ಪಷ್ಟವಾಗುತ್ತದೆ. ಯಾಕೆಂದರೆ ಈ ಸಂದರ್ಶನದ ಒಂದು ತಿಂಗಳ ಮೊದಲೇ ಅಂದರೆ ಡಿಸೆಂಬರ್ 10ರಂದು ಪ್ರೊ॥ ಹಬೀಬ್ ಮತ್ತು ಅವರ ಒಬ್ಬ ಸಹೋದ್ಯೋಗಿಯ ಮೇಲೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಲ್ಲೆ ನಡೆದಿತ್ತು. ಹೀಗೆ ಹಲ್ಲೆ ನಡೆಸಿದಾಗ ಒಬ್ಬ ಮಾಜೀ ವಿದ್ಯಾರ್ಥಿ ಜುಲೈ ತಿಂಗಳಲ್ಲಿ ಪರೀಕ್ಷೆಯಲ್ಲಿ ಅಕ್ರಮ ನಡೆಸುವಾಗ ಪ್ರೊ॥ ಹಬೀಬ್ ಕೈಗೆ ಸಿಕ್ಕಿಬಿದ್ದ ಇನ್ನೊಬ್ಬ ವಿದ್ಯಾರ್ಥಿ ಈಗ ಅವರ ವಿರುದ್ಧ ನಡೆಯುತ್ತಿರುವ ಚಳವಳಿಯ ಒಬ್ಬ ನಾಯಕ. ಈತನ ಮೇಲೆ ಹಲವು ಕ್ರಿಮಿನಲ್ ಮೊಕದ್ದಮೆಗಳಿದ್ದರೂ, ಮೊರಾದಾಬಾದಿನಿಂದ ಪೋಲೀಸರಿಂದ ಗಡೀಪಾರು ಆಗಿದ್ದರೂ ಆಗಿನ ಉಪಕುಲಪತಿಗಳಾದ ಎ. ಎಮ್. ಖುಸ್ರೋರವರು ಈತನಿಗೆ ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ಕೊಡಿಸಿದ್ದರು. ಒಬ್ಬ ಅಧ್ಯಾಪಕರನ್ನು ಅವಮಾನಗೊಳಿಸಿದ್ದಕ್ಕಾಗಿ ಡಿಸೆಂಬರ್ 24ರಂದು ಅವನನ್ನು ವಿಶ್ವವಿದ್ಯಾನಿಲಯದಿಂದ ವಜಾ ಮಾಡಬೇಕಿತ್ತು. ಆದರೆ ಆತ ನಂತರವೂ ವಿಶ್ವವಿದ್ಯಾನಿಲಯದ ಹಾಸ್ಟೆಲ್‌ನಲ್ಲೇ ಇದ್ದ. ಇದೇ ರೀತಿ ಕ್ರಿಮಿನಲ್ ಮೊಕದ್ದಮೆಗಳಿದ್ದು ವಿದ್ಯಾರ್ಥಿಯೆಂಬ ಹೆಸರಲ್ಲಿ ವಿಶ್ವವಿದ್ಯಾನಿಲಯದಲ್ಲಿ ಆಶ್ರಯ ಪಡೆದವರ ಸಂಖ್ಯೆ ಸುಮಾರು ಇನ್ನೂರು ಇತ್ತಂತೆ. ಉಪಕುಲಪತಿ ಖುಸ್ರೋರವರು ತನ್ನ ಐದು ವರ್ಷಗಳ ಅಧಿಕಾರಾವಧಿಯಲ್ಲಿ ತನ್ನ ಸಂಕುಚಿತ ಉದ್ದೇಶ ಸಾಧನೆಗಾಗಿ ಕೋಮುವಾದಿಗಳಿಗೆ ಬಹಳಷ್ಟು ಪ್ರೋತ್ಸಾಹ ಕೊಟ್ಟರು. ವಿಶ್ವವಿದ್ಯಾನಿಲಯದ ಆವರಣದಲ್ಲಿ ಇದಕ್ಕಿಂತ ಮೊದಲು ಕೋಮುವಾದಿಗಳು ಇರಲಿಲ್ಲವೆಂದಲ್ಲ. ಆದರೆ ಖುಸ್ರೋರವರ ಕಾಲದಲ್ಲಿ ಸಂಕುಚಿತ ಭಾವನೆಯ ಕೋಮುವಾದೀ ಮುಸ್ಲಿಂ ಸಂಘಟನೆಯಾದ ಜಮಾತ್-ಎ-ಇಸ್ಲಾಮೀ ಹಾಗೂ ಇತರ ಕೋಮುವಾದೀ ಶಕ್ತಿಗಳಿಗೆ ಮತ್ತು ಕ್ರಿಮಿನಲ್ ತತ್ವಗಳಿಗೆ ಅಧಿಕೃತ ಆಶ್ರಯ ದೊರಕಿತು. ಭ್ರಷ್ಟ ವ್ಯವಹಾರಗಳಿಗೆ ಪ್ರೋತ್ಸಾಹ ಸಿಕ್ಕಿತು. ಪ್ರೊ॥ ಹಬೀಬರ ವಿರುದ್ಧ 'ರಷ್ಯಾದ ಏಜಂಟ್ ಹಬೀಬ್', 'ಕಮ್ಯುನಿಸ್ಟ್ ನಾಯಿ ಹಬೀಬ್', 'ಇಸ್ಲಾಮನ್ನು ಮುಗಿಸಿಬಿಡಬೇಕೆನ್ನುವ ಶಕ್ತಿಗಳ ಏಜಂಟರು 'ವಿಶ್ವವಿದ್ಯಾನಿಲಯದಲ್ಲಿದ್ದಾರೆ' ಮತ್ತು 'ಅಲೀಗಢ್ ಪೋಲಂಡಲ್ಲ' ಇತ್ಯಾದಿ ಹೊಲಸು ಮತ್ತು ಅರ್ಥಹೀನ ಘೋಷಣೆಗಳು ವಿಶ್ವವಿದ್ಯಾನಿಲಯದ ಆವರಣದಲ್ಲಿ ಕಾಣಸಿಗುತ್ತವೆ. ಚಳುವಳಿಯ ಒಬ್ಬ ನಾಯಕ "ಪಾಕೀಸ್ತಾನದಲ್ಲಿ ಜಿಯಾ ಸರ್ಕಾರ ಇಸ್ಲಾಮಿಕ್ ವ್ಯವಸ್ಥೆ ತರುವ ಉದ್ದೇಶ ಹೊಂದಿರುವುದರಿಂದ ಅಲ್ಲಿ ಚುನಾವಣೆಗಳನ್ನು ನಡೆಸಬಾರದು, ಜಿಯಾ ಸರ್ಕಾರ ಮುಂದುವರಿಯಬೇಕು" ಎಂದು ಹೇಳಿದ್ದಾನಂತೆ. ಪಾಕೀಸ್ತಾನದಲ್ಲಿ ವಿದ್ಯಾರ್ಥಿಗಳೂ ಸೇರಿದಂತೆ ಸಮಸ್ತ ಜನತೆ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಟವನ್ನು ಪ್ರಬಲಗೊಳಿಸುತ್ತಿರುವಾಗ ಇಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವ ಅಜ್ಞಾನಿಗಳ ನೇತೃತ್ವದಲ್ಲಿ ನಡೆಯುತ್ತಿರುವ ಚಳುವಳಿಯ ನಿಜವಾದ ಉದ್ದೇಶವೇನು ಎಂಬುದನ್ನರಿಯಲು ಬೇರೆ ಪುರಾವೆಗಳ ಅಗತ್ಯವಿಲ್ಲ.

ಪ್ರೊ॥ ಹಬೀಬರ 'ಅಪರಾಧ'ಗಳು

ಅಲೀಗಢ ವಿಶ್ವವಿದ್ಯಾನಿಲಯದ ಆಡಳಿತ ನೋಡಿಕೊಳ್ಳುವ ಪರಿಷತ್ತು ವಿಶ್ವವಿದ್ಯಾನಿಲಯದ ಒಂದು ಅತೀ ಪ್ರಭಾವಶಾಲೀ ಅಂಗ. ಪ್ರೊ॥ ಹಬೀಬ್ ಈ ಪರಿಷತ್ತಿಗೆ ಅಧ್ಯಾಪಕರಿಂದ ಚುನಾಯಿತರಾದ ಮೂವರಲ್ಲಿ ಒಬ್ಬರು. ತನ್ನ ಈ ಮಹತ್ವಪೂರ್ಣ ಸ್ಥಾನದಿಂದ ಅವರು ವಿಶ್ವವಿದ್ಯಾನಿಲಯದ ಆಡಳಿತದಲ್ಲಿನ ಭ್ರಷ್ಟಾಚಾರದ ಬಗ್ಗೆ, ಅಕ್ರಮ ವ್ಯವಹಾರಗಳ ಬಗ್ಗೆ, ಪರೀಕ್ಷೆಗಳು ಕಾಲಕ್ಕೆ ಸರಿಯಾಗಿ ನಡೆಯದಿರುವ ಬಗ್ಗೆ, ಕ್ರಿಮಿನಲ್ ವ್ಯಕ್ತಿಗಳಿಗೆ ಪ್ರವೇಶ ಕೊಟ್ಟ ಬಗ್ಗೆ ಕೇಳುತ್ತಿದ್ದ ಮೊನಚಾದ ಪ್ರಶ್ನೆಗಳು ವಿದ್ಯಾರ್ಥಿಗಳ ವೇಷತೊಟ್ಟ ರೌಡಿಗಳನ್ನೂ ಅವರ ಆಶ್ರಯದಾತರನ್ನೂ ಇಕ್ಕಟ್ಟಿನಲ್ಲಿ ಸಿಲುಕಿಸುತ್ತಿದ್ದವು. ಖುಸ್ರೋರವರ ನಂತರ ಉಪಕುಲಪತಿಯಾಗಿ ಅಧಿಕಾರವಹಿಸಿಕೊಂಡ ಸೈಯದ್ ಅಹಮದ್‌ರವರು ಆರಂಭದಲ್ಲಿ ಕ್ರಿಮಿನಲ್ ವ್ಯಕ್ತಿಗಳನ್ನು ವಿಶ್ವವಿದ್ಯಾನಿಲಯದ ಆವರಣದಿಂದ ಹೊರಹಾಕಲು ಹಾಗೂ ಪರೀಕ್ಷೆಗಳನ್ನು ಸಮಯಕ್ಕೆ ಸರಿಯಾಗಿ ನಡೆಸಲು ತಕ್ಕ ಕ್ರಮಕೈಗೊಂಡರು. ಇದಕ್ಕೆ ವಿದ್ಯಾರ್ಥಿ ಸಮುದಾಯದ ಸಹಕಾರವೂ ದೊರೆಯಿತು. ಇದರಿಂದ ಕುಪಿತರಾದ ಕೋಮುವಾದಿಗಳು ವಿದ್ಯಾರ್ಥಿಗಳ ಮೇಲೆ ತಮ್ಮ ಹಿಡಿತವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರು. ಇದರ ಅಂಗವಾಗಿಯೇ ಮೊದಲಿಂದಲೂ ತಮ್ಮ ಅವ್ಯವಹಾರಗಳನ್ನು ದೃಢವಾಗಿ ವಿರೋಧಿಸುತ್ತಿದ್ದ ಪ್ರೊ॥ ಹಬೀಬ್‌ರ ಮೇಲೆ ಬೆದರಿಕೆ, ಹಲ್ಲೆ ಇತ್ಯಾದಿ ನಡೆಸಿದರು. 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯವರು ನಡೆಸಿದ ಸಂದರ್ಶನದಲ್ಲಿ ವಿಶ್ವವಿದ್ಯಾನಿಲಯದ ಅಕ್ರಮ ವ್ಯವಹಾರಗಳು, ಕ್ರಿಮಿನಲ್ ವ್ಯಕ್ತಿಗಳ ಹಾವಳಿ ಅದಕ್ಕೆ ಸಿಕ್ಕ ಪ್ರೋತ್ಸಾಹ ಇತ್ಯಾದಿಗಳ ಬಗ್ಗೆ ನಿರ್ಭೀತರಾಗಿ ಅಭಿಪ್ರಾಯ ವ್ಯಕ್ತಪಡಿಸಿದ ಮೇಲೆ ಅವರನ್ನು ಅಮಾನತುಗೊಳಿಸಬೇಕೆಂದು ಈ ಕೋಮುವಾದೀ ವಿದ್ಯಾರ್ಥಿ ನಾಯಕರು ಒತ್ತಾಯ ಆರಂಭಿಸಿದರು. ಮೊದಮೊದಲು ಸ್ವತಂತ್ರ ನಿಲುವು ಕಳೆದು ಕೆಲವು ದಿಟ್ಟ ಕ್ರಮಗಳನ್ನು ಕೈಗೊಂಡ ಹೊಸ ಉಪಕುಲಪತಿಗಳು ವಿಶ್ವವಿದ್ಯಾನಿಲಯದಲ್ಲಿರುವ ಕೋಮುವಾದಿಗಳ ಒತ್ತಡಕ್ಕೆ ಹೀನವಾದ ರೀತಿಯಲ್ಲಿ ತಲೆಬಗ್ಗಿಸಿದರು. ಈಗ ಪ್ರೊ॥ ಹಬೀಬ್‌ರ ಮೇಲೆ ಚಾರ್ಜ್‌ಶೀಟ್ ಜಾರಿ ಮಾಡಲಾಗಿದೆ.

ಅಲೀಗಢ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರ ವಿರುದ್ಧ ಚಳುವಳಿ ನಡೆಯುತ್ತಿರುವುದು ಇದೇ ಮೊದಲೇನಲ್ಲ. ಇದುವರೆಗೆ ಈ ರೀತಿ ವಿರೋಧ ಎದುರಿಸಬೇಕಾಗಿ ಬಂದ ಅಧ್ಯಾಪಕರುಗಳಲ್ಲಿ ಎಲ್ಲರೂ ಸಂಕುಚಿತ ಸಾಂಪ್ರದಾಯಿಕತೆಯ ವಿರೋಧಿಗಳು ಹಾಗೂ ಜಾತ್ಯತೀತವಾದಿಗಳು ಎಂಬುದು ಗಮನಾರ್ಹ. ಹತ್ತು ವರ್ಷಗಳ ಹಿಂದೆ ಇಂಗ್ಲೀಷ್ ವಿಭಾಗದಲ್ಲಿ ರೀಡರ್ ಆಗಿದ್ದ ಝುಹೇದಾ ಜೈದಿಯವರು ವಿದ್ಯಾರ್ಥಿನಿಯರು ಪಾತ್ರವಹಿಸಿದ ನಾಟಕ ಆಡಿಸಿದರು ಎಂಬ ಕ್ಷುಲ್ಲಕ ಕಾರಣಕ್ಕಾಗಿ ಸಂಪ್ರದಾಯಶರಣರಾದ ಸಂಕುಚಿತ ಬುದ್ಧಿಯ ಕೆಲವು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಕಟುಟೀಕೆಯನ್ನು ಎದುರಿಸಬೇಕಾಯಿತು. ನಂತರ ಇಸ್ಲಾಮೀ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಮುನಿಬುರ್ ರಹಮಾನ್ ಇದೇ ಕಾರಣಕ್ಕಾಗಿ ಜಮಾತ್-ಎ-ಇಸ್ಲಾಮೀ ಸಂಘಟನೆಯ ಕೋಮುವಾದಿಗಳ ಕಿರುಕುಳದಿಂದ ಬೇಸತ್ತು ರಾಜೀನಾಮೆಕೊಟ್ಟರು. 1973ರಲ್ಲಿ ತನ್ನ 'ದಾರಾ ಶಿಕೋಹಾ' ಎಂಬ ಕೃತಿಗಾಗಿ ಪದ್ಮಶ್ರೀ ಪ್ರಶಸ್ತಿ ಪಡೆದ ಉರ್ದು ವಿಭಾಗದ ಖಾಜೀ ಅಬ್ದುಸ್ ಸತ್ತಾರ್ ತಮ್ಮ ಈ ಪುಸ್ತಕದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ನಿರಾಕರಿಸಬೇಕೆಂದು ಈ ಹಿಂದೆ ಹೇಳಿದ ಉಪಕುಲಪತಿ ಖುಸ್ರೋರವರು ಅವರನ್ನು ಒತ್ತಾಯಿಸಿದ್ದರಂತೆ. ಏಕೆಂದರೆ ಈ ಪುಸ್ತಕದಲ್ಲಿ ಔರಂಗಜೇಬನ ಚಿತ್ರಣ ಜಮಾತ್-ಎ-ಇಸ್ಲಾಮಿಗೆ ಸರಿಬರಲಿಲ್ಲವಂತೆ. ವಸ್ತುನಿಷ್ಠ ಸ್ವಭಾವದ, ವೈಜ್ಞಾನಿಕ ಮನೋಭಾವದ ಅಧ್ಯಯನಶೀಲ ಅಧ್ಯಾಪಕರ ಬಾಯಿಮುಚ್ಚಿಸುವ ಅಥವಾ ಅವರನ್ನು ಹೊರದಬ್ಬುವ ಕೋಮುವಾದಿಗಳ ಇನ್ನೊಂದು ಪ್ರಯತ್ನ ಈಗ ಪ್ರೊ॥ ಹಬೀಬ್ ವಿರುದ್ಧ ನಡೆಯುತ್ತಿರುವ ಚಳುವಳಿ.

ಚಾರಿತ್ರಿಕ ಹಿನ್ನೆಲೆ

ಉದಾತ್ತ ಶಿಕ್ಷಣವನ್ನು ಪ್ರಮುಖ ಉದ್ದೇಶವಾಗಿಟ್ಟುಕೊಂಡು ಹುಟ್ಟಿದ ಸಂಸ್ಥೆಯಲ್ಲಿ ಸಂಕುಚಿತ ಭಾವನೆ ಪ್ರಬಲಗೊಳ್ಳಲು ಕಾರಣಗಳೇನಿರಬಹುದು? ಒಬ್ಬ ವಿಶ್ಲೇಷಕರು ಅಭಿಪ್ರಾಯಪಡುವಂತೆ 1857ರ ಪ್ರಥಮ ಸ್ವಾತಂತ್ರ್ಯ ಯುದ್ಧದ ನಂತರದ 1947ರ ದೇಶ ವಿಭಜನೆಯ ನಂತರದ ಹಾಗೂ ಇತ್ತೀಚಿನ ಮೊರಾದಾಬಾದ್ ಘಟನೆಯ ನಂತರದ ಕಹಿ ಅನುಭವಗಳು ಮುಸ್ಲಿಂ ಯುವಕರ ಮನಸ್ಸಿನಲ್ಲಿ ಅಭದ್ರತೆಯ ಮಾನಸಿಕತೆಯನ್ನುಂಟುಮಾಡಿವೆ. ಅಲೀಗಢ ಮುಸ್ಲಿಂ ವಿಶ್ವವಿದ್ಯಾನಿಲಯದ ಬಗ್ಗೆ ಆಳುವ ವರ್ಗಗಳ ಪಕ್ಷಗಳ ರಾಜಕಾರಣಿಗಳ ನಿಲುವು ಅಲ್ಪಸಂಖ್ಯಾತರ ಸಮಸ್ಯೆಗಳ ಬಗ್ಗೆ ರಾಜಕಾರಣಿಗಳ ಪ್ರತಿಕ್ರಿಯೆಯಂತೆಯೇ ಸ್ಪಷ್ಟತೆಯಿಲ್ಲದ, ಅಸಂಬದ್ಧವಾದ ಕೆಲವೊಮ್ಮೆ ಅವಿಶ್ವಾಸದ ನಿಲುವು. ಪಾರ್ಲಿಮೆಂಟಿನೆದುರು ಹಲವು ಬಾರಿ ಮಂಡಿಸಲ್ಪಟ್ಟ ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯ ಮಸೂದೆಯ ವಿವಿಧ ರೂಪಗಳು ಇದಕ್ಕೆ ಉದಾಹರಣೆ. ಅಲ್ಪಸಂಖ್ಯಾತರ ಸಮಸ್ಯೆಗಳ ಬಗ್ಗೆ ಸರಿಯಾದ ತಿಳುವಳಿಕೆಯಾಗಲೀ, ಸಹಾನುಭೂತಿಯಾಗಲೀ, ನೈತಿಕತೆಯಾಗಲೀ ಇಲ್ಲದ ಆಳುವ ವರ್ಗಗಳ ಈ ಸಮಯಸಾಧಕ ರಾಜಕಾರಣಿಗಳು ಅಧಿಕಾರ ಪಡೆಯುವ ಭರದಲ್ಲಿ ಸಮಸ್ಯೆಯನ್ನು ಮತ್ತಷ್ಟು ಕ್ಲಿಷ್ಟಗೊಳಿಸಿದ್ದಾರೆ. ಇವೆಲ್ಲಾ ಒಟ್ಟು ಸೇರಿ ಮುಸ್ಲಿಂ ಯುವಕರು ಅದರಲ್ಲೂ ವಿದ್ಯಾರ್ಥಿಗಳು ಕೆಲವೊಮ್ಮೆ ನಿಜವಾದ ಭಯದಿಂದ ಕೆಲವೊಮ್ಮೆ ಕಲ್ಪಿತ ಭಯದಿಂದ ಪ್ರತಿಕ್ರಿಯಿಸುತ್ತಾರೆ. ದಿನೇ ದಿನೇ ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುವಾಗ ಸಮಸ್ಯೆಯ ಮೂಲವನ್ನು ತಿಳಿಯಲಾರದ ಇವರು ಮತ್ತಷ್ಟು ವಿಚಿತ್ರವಾಗಿ ವರ್ತಿಸುತ್ತಾರೆ. ಮುಸ್ಲಿಂ ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಕೇಂದ್ರವೆನಿಸಿದ ಅಲೀಗಢ ಮುಸ್ಲಿಂ ವಿಶ್ವವಿದ್ಯಾನಿಲಯದಲ್ಲಿ ಈ ಮಾನಸಿಕತೆ ಪ್ರಕಟವಾಗುತ್ತಿರುವ ರೀತಿಯನ್ನು ಹಿಂದೆ ಗಮನಿಸಿದ್ದೇವೆ. ಈ ವಿಶ್ವವಿದ್ಯಾನಿಲಯದ ಬಗ್ಗೆ ಗಮನದಲ್ಲಿಡ

[7ನೇ ಪುಟ ನೋಡಿ]

ಗುಜರಾತಿನ ಮೀಸಲಾತಿ ವಿರೋಧೀ ಚಳುವಳಿಗಾರರು ಹಾಗೂ ಅವರ ನಾಯಕರು ತಾವೇ ವೈದ್ಯಕೀಯ ಕ್ಷೇತ್ರದ ದಕ್ಷತೆಯ ಏಕಮಾತ್ರ ರಕ್ಷಕರೆಂಬಂತೆ ವರ್ತಿಸುತ್ತಿದ್ದಾರೆ. ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣಕ್ಕೆ ಮೀಸಲಾತಿ ಹೆಸರಲ್ಲಿ ಅಯೋಗ್ಯರಿಗೆ ಪ್ರವೇಶ ದೊರೆತರೆ ಸಾರ್ವಜನಿಕ ಆರೋಗ್ಯಕ್ಕೆ ಅಪಾಯವೊದಗುತ್ತದೆ ಎಂದು ಅವರು ವಾದಿಸುತ್ತಾರೆ. ಇದು ಅಪ್ಪಟ ಸುಳ್ಳು. ವಿಜ್ಞಾನ ಹಾಗೂ ಸಾರ್ವಜನಿಕ ಆರೋಗ್ಯದ ಇಷ್ಟೊಂದು ಕಾಳಜಿ ವಹಿಸುವ ಇವರನ್ನು ಕ್ಯಾಪಿಟೇಶನ್ ಫೀ ರೂಪದಲ್ಲಿ ಭಾರೀ ಹಣತೆತ್ತು ವೈದ್ಯಕೀಯ ಡಿಗ್ರಿ ಪಡೆಯಲು ಅವಕಾಶಗಳಿರುವುದರಿಂದ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ದುಡ್ಡಿದ್ದ ಅಯೋಗ್ಯರ ಪ್ರವೇಶವಾಗಿ ಅದಕ್ಕೆ ಧಕ್ಕೆ ಬರುವುದಿಲ್ಲವೇ? ಈ ಕುರಿತು ಚಳುವಳಿ ಏಕೆ ನಡೆಸುವುದಿಲ್ಲ ಎಂದು ಪರಿಶಿಷ್ಟ ಜಾತಿಗಳ ವಕ್ತಾರರು ಅಥವಾ ಅವರ ಬೆಂಬಲಿಗರು ಕೇಳಿದರೆ ನಿರುತ್ತರರಾಗಿ ಬಾಯಿಮುಚ್ಚಿಕೊಳ್ಳುತ್ತಾರೆ.

ಇನ್ನೊಂದು ವಿಷಯ: ಈ ಸ್ನಾತಕೋತ್ತರ ಪದವೀಧರ ವೈದ್ಯರಲ್ಲಿದೆಯೆನ್ನಲಾದ 'ದಕ್ಷತೆ'ಯಿಂದ ಪ್ರಯೋಜನ ಸಿಗುವುದಾದರೂ ಯಾರಿಗೆ? ಭಾರತದ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಕಿಂಚಿತ್ತಾದರೂ ಲಾಭವಿದೆಯೇ?



[ಫೆಬ್ರವರಿ 27ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ 'ಅಬೂ' ಅವರ ವ್ಯಂಗ್ಯ ಚಿತ್ರ]

ಫೆಬ್ರವರಿ 27, 1981 ರಂದು 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಪ್ರಕಟವಾದ ಖ್ಯಾತ ವ್ಯಂಗ್ಯ ಚಿತ್ರಕಾರ ಅಬೂ ಅಬ್ರಹಾಂರ ಮೇಲಿನ ವ್ಯಂಗ್ಯ ಚಿತ್ರ ಈ ಪ್ರಶ್ನೆಗೆ ಸಮರ್ಪಕ ಉತ್ತರ ನೀಡುತ್ತದೆ. ಬ್ರಿಟನ್ನಿನ ಒಂದು ಸಾರ್ವಜನಿಕ ಆಸ್ಪತ್ರೆಯಲ್ಲಿ ಸೇವೆಸಲ್ಲಿಸುತ್ತಿರುವ ಇಬ್ಬರು ವೈದ್ಯರುಗಳಲ್ಲಿ ಒಬ್ಬ ಇನ್ನೊಬ್ಬನಿಗೆ ತನ್ನ ಮೀಸಲಾತಿ ವಿರೋಧೀ ಧೋರಣೆ ಬಗ್ಗೆ ಸಮಜಾಯಿಸಿ ಕೊಡುತ್ತಾ ಹೇಳುತ್ತಿದ್ದಾನೆ-"ಹರಿಜನರು, ಬುಡಕಟ್ಟು ಜನಾಂಗದವರು ವೈದ್ಯರಾಗುವುದಕ್ಕೆ ನನ್ನ ವಿರೋಧವಿಲ್ಲ. ಆದರೆ ಅವರಿಗೆ ಬ್ರಿಟಿಷ್ ಆರೋಗ್ಯ ವಿಭಾಗವನ್ನು ನಡೆಸಲು ಸಾಧ್ಯವಾದೀತೇ?

ಈ 'ದಕ್ಷತೆ'ಯಿಂದ ನಿಜವಾಗಿಯೂ ಈ ದೇಶಕ್ಕೆ ಅದರಲ್ಲೂ ಈ ದೇಶದ ಬಡಜನತೆಗೆ ಸಿಗುವ ಲಾಭ ಅಷ್ಟಕಷ್ಟೆ ಎಂದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಮೀಸಲಾತಿ ವಿರೋಧಿಗಳು ಗುಜರಾತಿನಲ್ಲಾಗಲೀ ಬೇರೆಡೆಯಲ್ಲಾಗಲೀ ತಮ್ಮ ಪ್ರಾಮಾಣಿಕತೆಯನ್ನು ರುಜುವಾತುಪಡಿಸಲು ಬೇರೇನಾದರೂ ಕಾರಣ ಹುಡುಕಿಕೊಳ್ಳಬೇಕಾಗುತ್ತದೆ.

ಮೀಸಲಾತಿ ವಿರೋಧಿಸುವವರು ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗಿಂತ ನೀಚರು

ಕಳೆದ ವರ್ಷ ಮರಾಠಾವಾಡ ವಿಶ್ವವಿದ್ಯಾಲಯದ ಪುನರ್ ನಾಮಕರಣಕ್ಕೆ ಸಂಬಂಧಿಸಿದಂತೆ ನಡೆದ ದಲಿತ ವಿರೋಧಿ ಚಳುವಳಿಯ ಸದ್ದಡಗಿತು ಎನ್ನುವಷ್ಟರಲ್ಲಿಯೇ ಈಗ ಗುಜರಾತಿನ ಸರದಿ ಶುರುವಾಗಿದೆ. ಸ್ನಾತ್ತಕೋತ್ತರ ವೈದ್ಯಕೀಯ ಶಿಕ್ಷಣದಲ್ಲಿ ದಲಿತರಿಗೆ ಕೆಲವು ಸ್ಥಳಗಳನ್ನು ಮೀಸಲಿರಿಸುವ ಸರ್ಕಾರದ ನಿರ್ಧಾರವನ್ನು ವಿರೋಧಿಸತೊಡಗಿದಂದು, ಇಂದು ಗುಜರಾತಿನಾದ್ಯಂತ ಎಲ್ಲಾ ಮೀಸಲಾತಿಗಳನ್ನೂ ವಿರೋಧಿಸಿ ಹಿಂದುಳಿದ ಜನಾಂಗಗಳು ಪಡೆದುಕೊಂಡಿದ್ದ ಕೆಲವು ಹಕ್ಕುಗಳನ್ನು ನಾಶ ಮಾಡುವ ಕುತಂತ್ರದ ವ್ಯಾಪಕ ಜಾಲ ತನ್ನ ದಮನವನ್ನು ಪ್ರಾರಂಭಿಸಿದೆ. ಭಯಾನಕವಾದ ದಾರಿದ್ರ್ಯ ನಿರುದ್ಯೋಗದಿಂದ ನರಳುವ ಪರಿಸ್ಥಿತಿಯಲ್ಲಿ ವಿದ್ಯಾರ್ಥಿ ಹಾಗೂ ಜನಸಾಮಾನ್ಯರ ವಿಭಾಗವೊಂದು ಮೇಲ್ಜಾತಿ ಮೇಲ್ವರ್ಗಗಳ ಪಟ್ಟಭದ್ರ ಹಿತಾಸಕ್ತಿಯ ಒಳಸಂಚಿಗೆ ತುತ್ತಾಗಿರುವುದು ಖೇದಕರವಾದ ಸಂಗತಿ.

ಮೇಲಿನವರ ಸುಖ, ಸಂತೋಷ ಪ್ರತಿಷ್ಠೆ, ದರ್ಪ ಉಚ್ಚಸ್ಥಾನಗಳ ಕೆಳಗೆ ಸಿಲುಕಿ ಜಜ್ಜಿಹೋದ, ಈ ಸಮಾಜದ ಭಾರವನ್ನೆಲ್ಲಾ ತಲೆಯ ಮೇಲೆ ಹೊತ್ತು ದೇಹ ಸವೆಸಿ ಕಣ್ಣೀರ ಕಥೆಯ ಜೀವನ ಕಳೆದು ಮೂಕವಾದ ಜನಾಂಗಗಳು ಬಾಯಿಬಿಟ್ಟು ಮಾತಾಡಿ ಮನುಷ್ಯ ಜೀವನಕ್ಕೆ ಅರಳುವ ಹಕ್ಕುಗಳಿಗಾಗಿ ದಶಕಗಳ ಹೋರಾಟದಿಂದ ಮೀಸಲಾತಿಯನ್ನು ಪಡೆದುದಾಗಿದೆ. ಪದವಿಗಳ ಮೀಸಲಾತಿಯನ್ನೇನೂ ಯಾರೂ ಕೇಳಿಲ್ಲ. ಈ ಪದವಿಗಳ ಗಳಿಸಲು ಸ್ಥಳ ಮೀಸಲಾತಿಯನ್ನು ಮಾತ್ರ ಕೇಳಿದುದಾಗಿದೆ. ಹಾಗೆ ಸ್ಥಳ ಮೀಸಲಾತಿ ಇರದಿದ್ದಲ್ಲಿ ಎಲ್ಲಾ ಸ್ಥಳಗಳೂ ಸಾಂಸ್ಕೃತಿಕವಾಗಿ ಮುಂದುವರಿದ ಮೇಲ್ಜಾತಿ ಜನಗಳಿಗೇ ಮೀಸಲಾಗಿ ಬಿಡುತ್ತದೆ. ಮೀಸಲಾತಿ ಸದಾಕಾಲ ಶಾಶ್ವತವಾಗಿ ಇರಬೇಕೆಂದೇನೂ ಯಾರೂ ವಾದಿಸಿಲ್ಲ.

ಮೀಸಲಾತಿಗೆ ಬಡಿದಾಡಿದ ಡಾ॥ ಅಂಬೇಡ್ಕರ್‌ರವರೂ ಸಹ ಕೇಳಿದ್ದು ಹಲವು ವರ್ಷಗಳವರೆಗೆ; ಸಾಕಷ್ಟು ಪ್ರಮಾಣದಲ್ಲಿ ದಲಿತರು ಮೇಲೆ ಬರುವವರೆಗೆ. ಆದರೆ ಮೂರು ದಶಕಗಳಿಂದ ಮೀಸಲಾತಿ ಸೌಲಭ್ಯ ಇದ್ದರೂ ಕಾಂಗ್ರೆಸ್ ನಡೆಸಿದ ಭ್ರಷ್ಟ ಬಂಡವಾಳಶಾಹಿ ವ್ಯವಸ್ಥೆ ದಲಿತರನ್ನು ಮೇಲೇಳಲು ಬಿಟ್ಟಿಲ್ಲವೆಂಬುದು ಸಾರ್ವತ್ರಿಕವಾಗಿ ಎಲ್ಲರಿಗೂ ಗೊತ್ತಿರುವ ಸತ್ಯಸಂಗತಿ. ಗುಜರಾತಿನಲ್ಲೇ ಒಂದು ಉದಾಹರಣೆಯನ್ನು ತೆಗೆದುಕೊಂಡರೆ ಗುಜರಾತಿನ ಐದು ವೈದ್ಯಕೀಯ ಕಾಲೇಜುಗಳಲ್ಲಿರುವ ಪ್ರೊಫೆಸರ್ ಮತ್ತು ಇತರೆ ಶಿಕ್ಷಕರಲ್ಲಿ ಶೇ. 3 ರಷ್ಟು ಸಹ ದಲಿತರ ಪ್ರಾತಿನಿಧ್ಯವಿಲ್ಲ. ಹೀಗಿರುವಾಗ ಸಂವಿಧಾನಾತ್ಮಕವಾಗಿ ಬದ್ಧವಾದ ಮೀಸಲಾತಿಯನ್ನು ವಿರೋಧಿಸಲು ಯಾರಿಗೂ ಯಾವ ನೈತಿಕ ಹಕ್ಕೂ ಇಲ್ಲ.

ಮೀಸಲಾತಿ ಸೌಲಭ್ಯ ಎನ್ನುವುದು ಅನೇಕ ದಶಕಗಳಿಂದ ಸಾರ್ವಜನಿಕವಾಗಿ ಒಪ್ಪಿತವಾದ ಸೌಲ್ಯವಾಗಿದೆ. ಈ ದೇಶವನ್ನು ಸೂರೆಮಾಡಿ ದರ್ಬಾರು ನಡೆಸಿದ ಜಗತ್ಪ್ರಸಿದ್ಧ ಪುಂಡರಾದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳೂ ಸಹ ಒಪ್ಪಿಕೊಳ್ಳಲೇಬೇಕಾಗಿತ್ತು. ಅಂದಮೇಲೆ ಈಗ ಗುಜರಾತಿನಲ್ಲಿ ಮೀಸಲಾತಿಯನ್ನು ವಿರೋಧಿಸುವವರು ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗಿಂತ ನೀಚರಾಗಿದ್ದಾರೆ.

ಇದಕ್ಕೆ ಕಾರಣವೂ ಉಂಟು. 'ಭವ್ಯ ಭಾರತದ ಹರಿಕಥೆ ಹೇಳಿ ಭಾರತದ ಇತಿಹಾಸವನ್ನು ಬ್ರಿಟಿಷರ ಕಾಲಕ್ಕಿಂತಲೂ ಹಿಂದೊಯ್ಯುವ ಸಿದ್ಧಾಂತದ ಜನಗಳೇ ಈ ಚಳುವಳಿಯ ಪ್ರಚೋದಕ ಶಕ್ತಿಗಳಾಗಿವೆ. ಈ ಶಕ್ತಿಗಳು ಮಹಾಮಹಾ ಮಂಗಾಟಗಳನ್ನೂ ನಡೆಸಿವೆ. "ಸತ್ಯ ಶಾಂತಿ ತ್ಯಾಗಮೂರ್ತಿ" (ಗಾಂಧಿ)ಯ ಪ್ರತಿಮೆಯ ಮುಖಕ್ಕೆ ರಕ್ತದ ತಿಲಕಹಚ್ಚಿ ಅಹಿಂಸೆಯ ಪ್ರತಿಜ್ಞೆಗೈಯುವ ಕಪಟ ನಾಟಕವಾಡಿ ಇತ್ತ ದಲಿತರ ಬಸ್ತಿಗಳಿಗೆ ಬೆಂಕಿ ಹಚ್ಚುವ ಘೋರ ಕೃತ್ಯಗಳನ್ನು ನಡೆಸುತ್ತಿವೆ. ಗುಜರಾತಿನ ಮಾರ್ವಾಡಿಗಳೂ ಬ್ರಾಹ್ಮಣರೂ ಕೂಡ ನಡೆಸಿರುವ ಈ ಕ್ರೂರ ಪಿತೂರಿಯನ್ನು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳೂ ವಿರೋಧಿಸಿ ವಿಫಲಗೊಳಿಸಬೇಕು.

ದುಡಿಮೆಗಾರರನ್ನು ಒಡೆಯುವ ಕುತಂತ್ರವೂ ಹೌದು

ಮೀಸಲಾತಿಯನ್ನು ವಿರೋಧಿಸುವುದು ದಲಿತ ವಿರೋಧಿಯಾಗಿರುವುದಷ್ಟೇಯಲ್ಲದೆ ದುಡಿಯುವ ಕಾರ್ಮಿಕ ನೌಕರ ರೈತ ಜನತೆಯನ್ನು ಒಡೆಯುವ ಬಂಡವಾಳಶಾಹಿ ಮಹಾ ಕುತಂತ್ರವೂ ಆಗಿದೆ. ಹೀಗಾಗಿಯೇ ದಲಿತವಿರೋಧಿಗಳಿಗೆ ಮಾರ್ವಾಡಿ ಬಂಡವಾಳಶಾಹಿಗಳು ಹಣದ ಹೊಳೆಯನ್ನೇ ಹರಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕಾರ್ಮಿಕ ರೈತರ ದಿಟ್ಟವಾದ ಹೋರಾಟಗಳಿಂದ ಕುಪಿತಗೊಂಡಿರುವ ಬಂಡವಾಳಶಾಹಿಗಳು ಜಾತಿಕಲಹ ಎಬ್ಬಿಸಿ ಕಾರ್ಮಿಕ ನೌಕರರನ್ನು ಒಡೆದು ತಾವು ಸುಖಪಡುವ ಯೋಜನೆಯನ್ನು ಹಾಕಿಕೊಂಡಿವೆ. ಮೀಸಲಾತಿ ವಿಷಯದ ಮೇಲೆ, ಹಾಗೂ ಬೇರೆಬೇರೆ ಜಾತಿ ಆಧಾರಗಳ ಮೇಲೆ ಪ್ರತ್ಯೇಕ ಸಂಘಟನೆಗಳನ್ನು ಕಟ್ಟಿ ಕಾರ್ಮಿಕ ನೌಕರರ ಸಂಘಟಿತ ಐಕ್ಯತೆಯನ್ನು ಒಡೆಯಲಾಗಿದೆ. ಈ ದೇಶದ ಜನರ ತಲೆ ಒಡೆದು ರಕ್ತ ಕುಡಿದು ಕುಕ್ಕುತ್ತಿರುವ ಕಾಂಗ್ರೆಸ್ಸಿಗನೂ ತಮ್ಮ ಒಳಜಗಳದ ರಾಜಕೀಯಕ್ಕೆ ಈ ಕಲಹವನ್ನು ಬಳಸಿಕೊಳ್ಳುತ್ತಿದ್ದಾರೆ.

ನಿರುದ್ಯೋಗ, ದಾರಿದ್ರ್ಯಗಳಿಗೆ ಮೀಸಲಾತಿ ಎಂದೂ ಹೇಗೂ ಕಾರಣವಲ್ಲವೆನ್ನುವುದನ್ನೂ, ಮೀಸಲಾತಿ ವಿರೋಧ ಶೋಷಕರ ಪ್ರಚೋದಕ ಕೃತ್ಯ ಎನ್ನುವುದನ್ನು ಎಲ್ಲಾ ಜನಸಾಮಾನ್ಯರೂ ಅರಿಯಬೇಕು.

ದಲಿತರು ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಣ ಉದ್ಯೋಗ ರಾಜಕೀಯ ಇತರೆ ಸಾಮಾಜಿಕ ಸಾಂಸ್ಕೃತಿಕ ರಂಗದಲ್ಲಿ ಮುಂದುವರಿಯುವವರೆಗೂ ಮೀಸಲಾತಿಯನ್ನು ಮುಂದುವರಿಸಲು ಹಾಗೂ ಮೀಸಲಾತಿ ಇರದ ರಂಗಗಳಿಗೂ ವಿಸ್ತರಿಸಲು ಹೋರಾಡುವುದೂ, ಹಾಗೂ ಜಾತಿ ಆಧಾರದ ಮೇಲೆ ಶೋಷಿತ ಜನತೆಯನ್ನು ಒಡೆಯುವ ಬಂಡವಾಳಶಾಹಿ ಕುತಂತ್ರಗಳನ್ನು ಬಯಲಿಗೆಳೆದು ಎಲ್ಲಾ ಶೋಷಿತ ಜನತೆಯ ಐಕ್ಯತೆಯಿಂದ ನಿರುದ್ಯೋಗ ಬಡತನ ಸಂಕಟಗಳಿಗೆ ಕಾರಣವಾಗಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ನಾಶಗೊಳಿಸಲು ದಿಟ್ಟವಾಗಿ ಹೋರಾಡುವುದೂ ಮನುಷ್ಯತ್ವವಿರುವ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇದೇ ಭಾರತದಲ್ಲಿ ಮನುಷ್ಯತ್ವ ರಕ್ಷಿಸುವ ಏಕಮೇವ ದಾರಿಯಾಗಿದೆ.

—ಯಡೂರ ಮಹಾಬಲ

ಯೂನಿಯನ್ ವಾರ್ಷಿಕ ಸಭೆ

ಆಳಪೆ ಪ್ರದೇಶ ಬೀಡಿ ಲೇಬರ್ ಯೂನಿಯನ್‌ನ ವಾರ್ಷಿಕ ಮಹಾಸಭೆಯು 22-2-81ರಂದು ಜಪ್ಪಿನ ಮೊಗರುನಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಯೂನಿಯನ್‌ನ ಅಧ್ಯಕ್ಷರಾದ ಕಾಂ. ಕೆ. ಪೂವಪ್ಪ ಸಾಲಿಯಾನ್‌ರು ವಹಿಸಿದರು.

ಕಾಂ. ರಂಗಪ್ಪ ಸಾಲಿಯಾನ್ ಸ್ವಾಗತಿಸಿದ ನಂತರ ಕಾರ್ಮಿಕ ಮುಖಂಡ ಕಾಂ. ಬಿ. ಮಾಧವ ಮತ್ತು ಕಾಂ. ಮೂಸಬ್ಬ ಇವರು ಬೀಡಿ ಮಜೂರರನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯದರ್ಶಿ ಕಾಂ. ರಂಗಪ್ಪ ಸಾಲಿಯಾನ್‌ರು ವಾರ್ಷಿಕ ವರದಿಯನ್ನು, ಕಾಂ. ಮಾರಪ್ಪನವರು ಲೆಕ್ಕಪತ್ರವನ್ನು ಸಭೆಯಲ್ಲಿ ಮಂಡಿಸಿದರು. ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

ನಂತರ 13 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಅಧ್ಯಕ್ಷರಾಗಿ ಕೆ. ಪೂವಪ್ಪ ಸಾಲಿಯಾನ್, ಕಾರ್ಯದರ್ಶಿಯಾಗಿ ಜೆ. ಬಾಲಕೃಷ್ಣಶೆಟ್ಟಿ, ಉಪಾಧ್ಯಕ್ಷರಾಗಿ ಜೆ. ಸದಾಶಿವ, ಜೊತೆಕಾರ್ಯದರ್ಶಿಯಾಗಿ ಕಾ. ಶ್ರೀಧರ ಮತ್ತು ಕೋಶಾಧಿಕಾರಿಯನ್ನಾಗಿ ಕೃಷ್ಣಪ್ಪರನ್ನು ಆಯ್ಕೆ ಮಾಡಲಾಯಿತು.

○

ಕಾಲೇಜ್ ಪ್ರಿನ್ಸಿಪಾಲರ ವಿರುದ್ಧ ಪ್ರತಿಭಟನೆ

ರಾಯಚೂರು ಜಿಲ್ಲೆಯ ಸಿಂಧನೂರಿನ ಸರಕಾರಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಮುಕ್ಕುಂದಿಮಠರು ತಮ್ಮ ಅಸಭ್ಯ ನಡವಳಿಕೆಯಿಂದ ವಿದ್ಯಾರ್ಥಿ ಸಮುದಾಯದ ಆಗ್ರಹಕ್ಕೆ ಪಾತ್ರರಾಗಿದ್ದಾರೆ.

ಪ್ರಗತಿಪರ ವಿಚಾರಗಳ ವಿರೋಧಿಯಾದ ಶ್ರೀ ಮುಕ್ಕುಂದಿಮಠರು ಬೇರೆ ಬೇರೆ ಮತಧರ್ಮದವರನ್ನು ತುಚ್ಛವಾಗಿ ಕಾಣುತ್ತಿದ್ದಾರೆ. ಕಾಲೇಜಿನ ಜವಾಬ್ದಾರಿ ವ್ಯಕ್ತಿಯಾಗಿರುವ ಮಹಾಸಂಭಾವ ವಿದ್ಯಾರ್ಥಿಗಳಲ್ಲಿ ಅಶಾಂತಿ ಹಬ್ಬಿಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದಾರೆ.

6-3-81ರಂದು ಆಚರಿಸಲಾದ ಕ್ರೀಡಾಲಿನೋತ್ಸವವನ್ನು ಹಾಳುಗೆಡವಲು ಪ್ರಯತ್ನಿಸಿರುವರು. ಇವರ ಕಾರ್ಯವಿಧಾನದ ಬಗ್ಗೆ ಸರಕಾರಕ್ಕೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಅರ್ಪಿಸಿದ್ದಾರೆ. ಇಂಥ ಹೀನ ನಡವಳಿಕೆಯ ಪ್ರಿನ್ಸಿಪಾಲರ ವಿರುದ್ಧ ಸೂಕ್ತಕ್ರಮ ಕೈಗೊಳ್ಳಬೇಕೆಂದು ಎಸ್. ಎಫ್.ಐ. ಸಂಚಾಲಕ ಬಿ. ಲಿಂಗಪ್ಪ, ದಲಿತ ಸಂಘರ್ಷ ಸಮಿತಿಯ ಪರವಾಗಿ ವೆಂಕಪ್ಪ, ಬಂಡಾಯ ಸಾಹಿತ್ಯ ಸಂಘಟನೆಯ ಪರವಾಗಿ ಶಿವಪುತ್ರ ಮತ್ತು ವೀರಭದ್ರಪ್ಪ ಕಿಲ್ಲೇದ, ಸಮುದಾಯದ ಪರವಾಗಿ ಜಿ. ವಿಕ್ರಮ ಮೊದಲಾದವರು ಕೋರಿದ್ದಾರೆ. ●

ಆರ್ಥಿಕ ಸಮೀಕ್ಷೆ :

(3ನೇ ಪುಟದಿಂದ)

ರಿಯುವುದು. ಇದು ಬಂಡವಾಳ ಶಾಹಿ ಆರ್ಥಿಕ ವ್ಯವಸ್ಥೆಯ ಅನಿವಾರ್ಯ ದುಷ್ಪರಿಣಾಮ.

1979-80ರಲ್ಲಿ ಹಣದುಬ್ಬರವು ಶೇ. 23ರಷ್ಟಾಗಿದ್ದು, 1980-81ರಲ್ಲಿ ಅದು ಶೇ. 16 ರಷ್ಟಾಗಿತ್ತು. ಮುಂದಿನ ವರ್ಷದಲ್ಲಿ ಹಣದುಬ್ಬರವು ಶೇ. 15-20 ರಷ್ಟಾಗುವುದೆಂದು ಭಯಪಡಲಾಗಿದೆ. ಈಗಾಗಲೇ ರೂಪಾಯಿಯ ಬೆಲೆ (1960= 100) 24 ಪೈಸೆಗೆ ಇಳಿದಿದೆ !

ಆರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ರೂ. 97.500 ಕೋಟಿ ಸಂಪನ್ಮೂಲ ಸರಕಾರಿ ಕ್ಷೇತ್ರಕ್ಕೆ ಬೇಕಾಗಿದ್ದು, ಈಗಿನ ತೆರಿಗೆಯ, ಸಾಲದ ದರಗಳಲ್ಲಿ ಕೇವಲ 2/3ರಷ್ಟು ಬೇಕಾದ ಸಂಪನ್ಮೂಲ ಒದಗಿಸಬಹುದಾಗಿದ್ದು, ರೂ. 32,500ಕೋಟಿ ಇನ್ನೂ ಕೊರತೆ ಇರುವುದು. ಕಾರಣ, ಕೊರತೆ ಹಣ ಸೃಷ್ಟಿ, ದೇಶವಿದೇಶದಿಂದ ಸಾಲದ ಭಾರ, ತೆರಿಗೆಯ ಭಾರ ಇನ್ನೂ ಮುಂದೆಯೂ ತಪ್ಪಿದ್ದಲ್ಲ. ಈ ವರ್ಷಾಂತ್ಯದೊಳಗೇ ಇನ್ನೊಂದು ತುರ್ತಿನ ಮುಂಗಡಪತ್ರ ಸಲ್ಲಿಸಿ, ಅಧಿಕ ತೆರಿಗೆ ವಿಧಿಸಿದರೂ ಆಶ್ಚರ್ಯವಿಲ್ಲ.

ಮಳೆ ಬಂದರೆ ಮಾತ್ರ ಬೆಳೆ ಎಂಬ ಪರಿಸ್ಥಿತಿ ಇನ್ನೂ ಮುಂದುವರಿದಿರುವುದರಿಂದ, ಗುತ್ತೇದಾರಿ ಬಂಡವಾಳ ಶಾಹಿಗಳು ಕೈಗಾರಿಕಾ ಉತ್ಪಾದನೆಯನ್ನು ಹೆಚ್ಚಿಸಲು ಆಸಕ್ತರಾಗಿಲ್ಲದಿರುವುದರಿಂದ, ಉತ್ಪಾದಿತ ವಸ್ತುಗಳನ್ನು ನ್ಯಾಯಬೆಲೆಗೆ ಸಾರ್ವಜನಿಕರಿಗೆ ಸಕಾಲದಲ್ಲಿ ವಿತರಣೆಮಾಡುವ ಪರಿಪೂರ್ಣವಾದ ವ್ಯವಸ್ಥೆ ಇಲ್ಲದಿರುವುದರಿಂದ ಬೆಲೆಏರಿಕೆ ಹಣದುಬ್ಬರಗಳ ಬೇಗೆ ಬಗೆಹರಿಯುವುದಿಲ್ಲ.

ಮಧ್ಯಮವರ್ಗಕ್ಕೆ ತೆರಿಗೆ ರಿಯಾಯತಿ ?

ಬೆಲೆಏರಿಕೆ, ಹಣದುಬ್ಬರದಿಂದ ತತ್ತರಿಸುತ್ತಿದ್ದ ಮಧ್ಯಮವರ್ಗ, ಮುಖ್ಯವಾಗಿ ನಿಶ್ಚಿತ ವರಮಾನವಿರುವ ನೌಕರವರ್ಗ, ಹೊಸ ತೆರಿಗೆ ರಿಯಾಯತಿಯಿಂದ ಏನು ಲಾಭ ಪಡೆದೀತು ? ಆದಾಯ ತೆರಿಗೆ ರೂ. 15.000 ವಾರ್ಷಿಕ ವರಮಾನ ಇರುವವರಿಗೆ ಇನ್ನು ಮುಂದೆ ಇಲ್ಲ ಎಂದು ಮಾಡಲಾಗಿದೆ. ನಿಜ, ಇದರಿಂದ 15 ಲಕ್ಷ ಜನರು ಆದಾಯ ತೆರಿಗೆ ಕೊಡಬೇಕಾಗಿಲ್ಲ. ರೂ. 15.000 ದಿಂದ 25.000 ವಾರ್ಷಿಕ ವರಮಾನವಿರುವವರಿಗೆ ಆದಾಯ ತೆರಿಗೆಯಲ್ಲಿ ರಿಯಾಯತಿ ತೋರಿಸಲಾಗಿದ್ದು, ಒಟ್ಟು 40 ಲಕ್ಷ ತೆರಿಗೆದಾರರಲ್ಲಿ ಇನ್ನೂ 11 ಲಕ್ಷ ತೆರಿಗೆದಾರರಿಗೆ ಸ್ವಲ್ಪ ಪರಿಹಾರ ಸಿಗುವುದು ನಿಜ. ಆದರೆ, ರೂಪಾಯಿಯ ಬೆಲೆ (1960-100) 1970-71ರಲ್ಲಿ 54 ಪೈಸೆ ಇದ್ದುದು, 1980-81ರಲ್ಲಿ 24 ಪೈಸೆ ಇತ್ತು, ಈ ದೃಷ್ಟಿಯಿಂದ ತೆರಿಗೆ ವಿನಾಯತಿಯ ಗರಿಷ್ಟ ಆದಾಯವನ್ನು ರೂ. 8000 ದಿಂದ ರೂ. 16,000 ಕ್ಕೆ ಏರಿಸಬೇಕಾಗಿತ್ತು. ಆದರೆ, ಈಗ ರೂ. 15,000 ಕ್ಕಷ್ಟೇ ಈ ಮಿತಿಯನ್ನು ಏರಿಸಲಾಗಿದೆ. ಹಾಗೆಯೇ ಈಗಿನ ರೂ. 25,000 ವಾರ್ಷಿಕ ಆದಾಯ ಎಂದರೆ 10 ವರ್ಷಗಳ ಹಿಂದೆ ರೂ. 12,500.

ಹಣದುಬ್ಬರವನ್ನು ಗ್ರಾಹಕ ಬೆಲೆ ಸೂಚಿ ಸ್ಪಷ್ಟವಾಗಿ ತೋರಿಸುತ್ತಿಲ್ಲ. ಅದರಲ್ಲಿಯೂ ಮೋಸ, ಅಕ್ರಮ ನಡೆಯುತ್ತಿದೆ. ಏರಿದ ಬೆಲೆಸೂಚಿ ಗನುಗುಣವಾಗಿ ನೂರಕ್ಕೆ ನೂರರಷ್ಟು ಪರಿಹಾರವಾಗಿ ತುಟ್ಟಿಭತ್ತೆ ಎಲ್ಲಾ ವರ್ಗದ ನೌಕರರಿಗೆ ಸಿಗುತ್ತಿಲ್ಲ. ಅಲ್ಪ ಸ್ವಲ್ಪ ತುಟ್ಟಿಭತ್ತೆ ಸಿಗುತ್ತಿದ್ದುದಕ್ಕೂ ಇದು ತನಕ ವಿಪರೀತ ಪ್ರತ್ಯಕ್ಷ ತೆರಿಗೆ ಹಾಕಲಾಗುತ್ತಿತ್ತು. ಬೆಲೆಗಳು ಇನೂ ಏರಲಿರುವುದರಿಂದ, ಮಧ್ಯಮವರ್ಗದವರ ಬಾಯಿಮುಚ್ಚಿಸಲು ಸರಕಾರ ಈ ಸಲ ಅವರಿಗೆ ಆದಾಯ ತೆರಿಗೆಯಲ್ಲಿ ರಿಯಾಯತಿ ತೋರಿಸಿದೆ. ಈ ಪರಿಹಾರದ ಮೊತ್ತ ರೂ. 146 ಕೋಟಿ. ಅಷ್ಟೇ. ಸರಕಾರ ಇದರ ಹತ್ತುಪಾಲು ಹಣವನ್ನು ಮಧ್ಯಮವರ್ಗದಿಂದ, ಬಡಜನರಿಂದ ಬೆಲೆಏರಿಕೆಯ ಮೂಲಕ, ಅಪ್ರತ್ಯಕ್ಷ ತೆರಿಗೆಗಳ ಮೂಲಕ ಖಂಡಿತ ಪಡೆಯುವುದು. ರೂಪಾಯಿಯ ಬೆಲೆ 24 ಪೈಸೆಗೆ ಇಳಿಸಿ, ಒಂದು ಪೈಸೆಯ ರಿಯಾಯತಿ ತೋರಿಸಿ ಔದಾರ್ಯ ಮೆರೆಸಿಕೊಳ್ಳುವ ಮೋಸ ಈ ಮುಂಗಡಪತ್ರದಲ್ಲಿದೆ!

ಜೊತೆಗೇ, ರೂ. 15,000 ದಿಂದ ರೂ. 25,000 ವಾರ್ಷಿಕ ಆದಾಯದವರಿಗೆ ಶೇ. 15ರಿಂದ ಶೇ. 25 ರಷ್ಟು ತೆರಿಗೆ ದರವಿದ್ದು ಈಗ ಒಮ್ಮೆಲೇ ಶೇ. 30ಕ್ಕೆ ಏರಿಸಲಾಗಿದೆ. ರೂ. 25,000 ದಿಂದ ರೂ. 30,000 ದಷ್ಟು ವಾರ್ಷಿಕ ವರಮಾನವಿರುವವರಿಗೆ ತೆರಿಗೆ ದರ ಶೇ. 30 ರಿಂದ ಶೇ. 34ಕ್ಕೆ ಏರಿಸಲಾಗಿದೆ. ಆಮೇಲಿನ ಶ್ರೀಮಂತವರ್ಗದ ಆದಾಯ ತೆರಿಗೆಯ ದರಗಳನ್ನು ಹೆಚ್ಚಿಸಲೇ ಇಲ್ಲ. ಮರಣೋತ್ತರ ಆಸ್ತಿಯ ಮೇಲಿನ ತೆರಿಗೆಗಾಗಿ, ಆಸ್ತಿಯ ಕನಿಷ್ಟ ಮೌಲ್ಯವನ್ನು ರೂ. 50.000 ದಿಂದ ರೂ 1,50,000ಕ್ಕೆ ಏರಿಸಿರುವುದರಿಂದ ಶ್ರೀಮಂತವರ್ಗಕ್ಕೆ ಭಾರೀ ಲಾಭವಾಗಿದೆ. ತೆರಿಗೆಕಳ್ಳರಿಗೆ, ಅಕ್ರಮ ಸಂಗ್ರಹಗಾರರಿಗೆ, ಕಾಳಸಂತೆ ಕದೀಮರಿಗೆ, ಸಮಾಜಘಾತುಕರಿಗೆ, ಭ್ರಷ್ಟಾಚಾರಿಗಳಿಗೆ ತಮ್ಮ ಕಪ್ಪುಹಣವನ್ನು ತೆರಿಗೆಯ ಭಾರವಿಲ್ಲದೆ, ಯಾವ ಶಿಕ್ಷೆಯ ಹೆದರಿಕೆ ಇಲ್ಲದೆ ಬೇರರ್ ಬಾಂಡಿನಲ್ಲಿ ತೊಡಗಿಸಿ ಬಡ್ಡಿಸಹಿತ ಬಿಳಿಹಣವನ್ನಾಗಿ ಮಾಡಿಕೊಳ್ಳಲು ಇಂದಿರಾಗಾಂಧಿ ಸರ್ಕಾರ ಅನುಕೂಲ ಮಾಡಿಕೊಟ್ಟಿದೆ!

ಕಾರ್ಮಿಕ ಸಂಘಟನೆಗಳ ಮೇಲೆ ಪ್ರಹಾರ :

ಕೇಂದ್ರ ಮುಂಗಡ ಪತ್ರವು, ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆಯನ್ನು ಮುಚ್ಚಿಡಲು ಪ್ರಯತ್ನಿಸುತ್ತಿದೆ. 1,50,000 ಸಾರ್ವಜನಿಕ ರಂಗದ ಕೈಗಾರಿಕಾ ಕಾರ್ಮಿಕರು 70 ದಿನಗಳಿಂದ ಮುಷ್ಕರ ನಿರತರಾಗಿದ್ದಾರೆ. ನವ್ಮದೇ ಆದ ಭಾರತ್ ಹೆವ್ವಿ ಇಲೆಕ್ಟ್ರಿಕಲ್ (ಬಿ.ಎಚ್.ಇ.ಎಲ್.) ಸಂಸ್ಥೆಯ ಕಾರ್ಮಿಕರಷ್ಟೇ ತಮಗೂ ವೇತನ, ತುಟ್ಟಿಭತ್ತೆ, ಬೋನಸ್ ಹೆಚ್ಚಿಸಬೇಕು ಎಂದು. ಆದರೆ. ಸರ್ಕಾರ ಮುಷ್ಕರವನ್ನು ದಮನಿಸುವ ಪ್ರಯತ್ನದಲ್ಲಿದೆ. 25,000 ಸಾಮಾನ್ಯ ವಿಮಾನೌಕರರ ವೇತನ, ಭತ್ತೆಗಳನ್ನು ಏಕಪಕ್ಷೀಯವಾಗಿ ಪ್ರಕಟಿಸಿರುವುದರಿಂದ ಅವರ ಚೌಕಾಶಿ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ. 45,000 ಜೀವವಿಮಾ ನೌಕರರ ಬೋನಸ್, ತುಟ್ಟಿಭತ್ತೆ ಕಡಿತದ ಶಾಸನತಂದು ಸುಪ್ರೀಂಕೋರ್ಟಿನಲ್ಲಿ ನೌಕರರ ಪರವಾಗಿ ನೀಡಿದ ತೀರ್ಪನ್ನು ಅಲಕ್ಷಿಸಲಾಗಿದೆ. ಒಂದು ಲಕ್ಷ ಲೋಕೋ ಕಾರ್ಮಿಕರು ತಮ್ಮ ಬೇಡಿಕೆಗಳಿಗೆ ಹೋರಾಟಮಾಡುತ್ತಿದ್ದಾಗ, ಅವರ ಧುರೀಣರನ್ನು ರಕ್ಷಣಾ ಕಾಯ್ದೆಯಲ್ಲಿ ವಿಚಾರಣೆ ಇಲ್ಲದೆ ಸೆರೆಮನೆಯಲ್ಲಿಡಲಾಗಿದೆ. ರಕ್ಷಣಾ ಕಾನೂನು ಆರ್ಥಿಕ-ಸಾಮಾಜಿಕ ಅಪರಾಧಿಗಳ ವಿರುದ್ಧ ಮಾತ್ರ ಬಳಸುವುದಾಗಿ ಆಶ್ವಾಸನೆಕೊಟ್ಟಿದ್ದರೂ, ಇಂದು ವಿರೋಧ ಪಕ್ಷಗಳ ನಾಯಕರ ಹಾಗೂ ರೈತ-ಕಾರ್ಮಿಕ-ವಿದ್ಯಾರ್ಥಿ-ಯುವಜನ ಸಂಘಟನೆಗಳ ನಾಯಕರ ಮೇಲೆಯೇ ಈ ಬ್ರಹ್ಮಾಸ್ತ್ರವನ್ನು ಬಳಸಲಾಗುತ್ತಿದೆ.

ಬಡತನರೇಖೆಗಿಂತಲೂ ಕೆಳಮಟ್ಟದ ಜನಸಂಖ್ಯೆ ಹೆಚ್ಚುತ್ತಿದೆ. ನಿರುದ್ಯೋಗಸ್ಥರ ಸಂಖ್ಯೆ ಹೆಚ್ಚುತ್ತಿದೆ. ಕೃಷಿ ಕಾರ್ಮಿಕರ, ಬಡರೈತರ, ಆದಾಯ ಮತ್ತು ಗ್ರಾಹಕಶಕ್ತಿಯು ಬೆಲೆಏರಿಕೆ ಹಣದುಬ್ಬರದಿಂದ ಕುಸಿಯುತ್ತಿದೆ. ಅವರ ಸಂಘಟಿತ ಹೋರಾಟಗಳನ್ನು ಅಮಾನುಷವಾಗಿ ಹತ್ತಿಕ್ಕಲಾಗುತ್ತಿದೆ. ದೇಶಾದ್ಯಂತ, ರೈತ-ಕಾರ್ಮಿಕರ ಐಕ್ಯ ಹೋರಾಟವು ಹರಿತಗೊಳ್ಳುತ್ತಿದೆ. ರೈತ-ಕಾರ್ಮಿಕ ವಿರೋಧಿ ಧೋರಣೆಯನ್ನು ಮುಚ್ಚಿಟ್ಟು, ಬಂಡವಾಳ ಶಾಹಿಗಳಿಗೆ-ಭೂಮಾಲಕರಿಗೆ - ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಲಾಭಗಟ್ಟಿಸುವ ಮೋಸದ ಪ್ರಯತ್ನ ಈ ವರ್ಷದ ಮುಂಗಡಪತ್ರದಲ್ಲಿರುವುದನ್ನು ಪ್ರಜಾಕೋಟಿ ಮರೆಯಬಾರದು.

○

ಐ.ಎನ್.ಟಿ.ಯು.ಸಿ.ಯ ಗೂಂಡಾಗಿರಿ

ಮಾರ್ಚ್ 10ರಂದು ಕೆಲವು ಸಮಾಜಘಾತುಕ ಶಕ್ತಿಗಳ ನೇತೃತ್ವದಲ್ಲಿ ಗೂಂಡಾಗಳ ಗುಂಪೊಂದು ಪೋಲೀಸರ ಸಮ್ಮುಖದಲ್ಲೇ ಮೈಕೋ ಕಾರ್ಮಿಕ ಸಂಘದ ಆಫೀಸನ್ನು ಅಕ್ರಮ ಕೈವಶಮಾಡಿಕೊಂಡಿದೆ. ಚಾಕು-ಚೂರಿ ಮತ್ತು ಚೈನುಗಳನ್ನು ಯಥೇಷ್ಟವಾಗಿ ಬಳಸಿ ಕಾರ್ಮಿಕರನ್ನು ಭಯಗೊಳಿಸುವ ಕೃತ್ಯ ನಡೆಯುತ್ತಿದೆ. ಸಧ್ಯದ ನಾಯಕತ್ವವನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದ ಗೂಂಡಾಗಳು "ಎಫ್. ಎಂ. ಖಾನ್ ಜಿಂದಾಬಾದ್" ಎಂದು ಕೂಗುತ್ತಿದ್ದರು.

ಹಾಡೇ ಹಗಲೇ ನಡೆದಿರುವ ಈ ಗೂಂಡಾಗಳ ಕೃತ್ಯದ ಬಗ್ಗೆ ಪೋಲೀಸ್ ಪಡೆ ನಿಷ್ಕ್ರಿಯವಾಗಿದೆ. ಯಾರ ಮೇಲೂ ಕ್ರಮಕೈಗೊಂಡಿಲ್ಲ!

ಟ್ರೇಡ್‌ಯೂನಿಯನ್ ಮೇಲೆ ನಡೆಯುತ್ತಿರುವ ಈ ತರಹದ ಗೂಂಡಾಕೃತ್ಯವನ್ನು ಪ್ರತಿಭಟಿಸಬೇಕೆಂದು, ಕಾರ್ಮಿಕ ವರ್ಗಕ್ಕೆ ಮತ್ತು ಜನಪರ ಶಕ್ತಿಗಳಿಗೆ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾಯರು ಮನವಿಮಾಡಿಕೊಂಡಿದ್ದಾರೆ.

●

ಕೋಮುವಾದಿಗಳ ಹಾವಳಿ

(5ನೇ ಪುಟದಿಂದ)

ಬೇಕಾದ ಇನ್ನೊಂದು ವಿಷಯವಿದೆ. ಇದು ಭಾರತದ ಎಲ್ಲಾ ಮುಸ್ಲಿಮರ ಶಿಕ್ಷಣ ಕೇಂದ್ರವೆನಿಸಿದರೂ ವಾಸ್ತವದಲ್ಲಿ ಉತ್ತರ ಪ್ರದೇಶದ ಪಶ್ಚಿಮ ಭಾಗದ ಪ್ರಭಾವಶಾಲೀ ಮುಸ್ಲಿಮರು ಇಲ್ಲಿ 90%ದಷ್ಟು ಸ್ಥಾನಗಳನ್ನು ತಮಗಾಗಿ ಮೀಸಲಿರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಉಳಿದ ಎಲ್ಲಾ ಮುಸ್ಲಿಮರಿಗೆ ಒಟ್ಟು 10% ಪ್ರವೇಶಾವಕಾಶಗಳು ಮಾತ್ರ. ಆಳುವ ವರ್ಗದ ರಾಜಕಾರಣಿಗಳು ಅಲ್ಪಸಂಖ್ಯಾತರ ಇಂತಹ ಒಂದು ಪ್ರಬಲ ಗುಂಪನ್ನು ತಮ್ಮೊಡನೆ ಸೆಳೆದುಕೊಂಡು ಅದರ ಮೂಲಕ ಎಲ್ಲಾ ಅಲ್ಪಸಂಖ್ಯಾತರ ಓಟುಗಳನ್ನು ಪಡೆಯುವುದಕ್ಕಾಗಿ ಅವರ ಸಂಕುಚಿತ ಮನೋಭಾವದ ಬೇಡಿಕೆಗಳನ್ನು ಮನ್ನಿಸುತ್ತಾರೆ. ಪ್ರೊ॥ ಹಬೀಬ್‌ರ ವಿರುದ್ಧ ಹೊಸ ಉಪಕುಲಪತಿಗಳು ಚಾರ್ಜ್‌ಶೀಟ್ ಜಾರಿ ಮಾಡುವಂತೆ ಒತ್ತಾಯಿಸುವಲ್ಲಿ ಕಾಂಗ್ರೆಸ್(ಐ) ಪಾತ್ರವೂ ಇದೆ, ಸಧ್ಯದಲ್ಲಿ ನಡೆಯಲಿರುವ ವಿಧಾನಸಭಾ ಉಪಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಹೀಗೆ ಮಾಡಲಾಗಿದೆ ಎಂಬುದೇ ಈ ಪ್ರವೃತ್ತಿಗೆ ಇತ್ತೀಚಿನ ಉದಾಹರಣೆ. ಇಂತಹ ಸನ್ನಿವೇಶದಲ್ಲಿ ಕೋಮು ವಿಷವನ್ನು ಹರಡಿಸುವಲ್ಲಿ ಜಮಾತ್, ಆರ್.ಎಸ್.ಎಸ್. ನಂತಹ ಸಂಘಟನೆಗಳು ಎಂದೂ ಹಿಂದೆ ಬೀಳುವುದಿಲ್ಲ.

ಪ್ರಜಾಪ್ರಭುತ್ವವಾದಿಗಳು ಪ್ರತಿಭಟಿಸಬೇಕು

ಇವನ್ನೆಲ್ಲಾ ಪ್ರಜಾಪ್ರಭುತ್ವವಾದಿಗಳು, ಜಾತ್ಯತೀತವಾದಿಗಳು ಬಲವಾಗಿ ಪ್ರತಿಭಟಿಸಬೇಕು. ಯಾಕೆಂದರೆ ಇಂತಹ ಕೋಮುಭಾವನೆಗಳು ನಿರುದ್ಯೋಗ, ಬಡತನದಂತಹ ಮೂಲಭೂತ ಸಮಸ್ಯೆಗಳಿಂದ ಯುವಕರ ಹಾಗೂ ಬಡಜನರ ಗಮನವನ್ನು ದೂರ ಸೆಳೆದು ದಾರಿತಪ್ಪಿಸುತ್ತವೆ. ಇಂತಹ ಕೋಮುವಾದಿ ಚಳವಳಿಗಳು ಯಾವ ಸಮಸ್ಯೆಯನ್ನೂ ಪರಿಹರಿಸುವುದಿಲ್ಲ. ಉದಾಹರಣೆಗೆ, ಇಸ್ಲಾಂ ಸಂಸ್ಕೃತಿ ಬಗ್ಗೆ ಅಲೀಗಢ ಮುಸ್ಲಿಂ ವಿಶ್ವವಿದ್ಯಾನಿಲಯದಲ್ಲಿ ಗುಲ್ಲೆಬ್ಬಿಸುವವರು ಹತ್ತಿರದ ಬಿಹಾರ್‌ನಲ್ಲಿ ಬಡ ಮುಸ್ಲಿಂ ನೇಕಾರರು ಕೈಗಾರೀಕರಣದಿಂದಾಗಿ ಎಲ್ಲಾ ಕಳೆದುಕೊಂಡು ನಿರ್ಗತಿಕರಾದಾಗ ಅವರ ಬಗ್ಗೆ ಚಕಾರವನ್ನೂ ಎತ್ತುವುದಿಲ್ಲ. ಎಲ್ಲಾ ಕೋಮುಗಳಿಗೆ ಸೇರಿದ ಬಡಜನರು ಹಾಗೂ ಅವರ ಪರವಾಗಿ ಹೋರಾಡುವವರು, ಪ್ರಜಾಪ್ರಭುತ್ವವಾದಿಗಳು ಧರ್ಮ, ಸಂಸ್ಕೃತಿಯ ಹೆಸರಲ್ಲಿ ನಡೆಯುವ ಈ ಮೋಸವನ್ನು ಮನಗಾಣಬೇಕು. ಈಗಾಗಲೇ ಬುದ್ಧಿಜೀವಿಗಳೆಲ್ಲಾ ಪ್ರೊ॥ ಹಬೀಬ್‌ರ ವಿರುದ್ಧ ಕೈಗೊಂಡಿರುವ ಕ್ರಮಗಳನ್ನು ತೀವ್ರವಾಗಿ ಖಂಡಿಸಿದ್ದಾರೆ. ದಿಲ್ಲೀ ವಿಶ್ವವಿದ್ಯಾನಿಲಯ, ಜವಹರ್‌ಲಾಲ್ ನೆಹರೂ ವಿಶ್ವವಿದ್ಯಾನಿಲಯ, ಮಹರ್ಷಿ ದಯಾನಂದ ವಿಶ್ವವಿದ್ಯಾನಿಲಯ ಇತ್ಯಾದಿಗಳ ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಸಂಘಟನೆಗಳು, ಭಾರತ ವಿದ್ಯಾರ್ಥಿ ಫೆಡರೇಶನ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಇತ್ಯಾದಿ ಹಲವರು ಪ್ರೊ॥ ಹಬೀಬ್‌ರಿಗೆ ಬೆಂಬಲವಾಗಿ ಹೇಳಿಕೆ ನೀಡಿದ್ದಾರೆ. ಕೋಮುವಾದಿಗಳ ಕುತಂತ್ರ ಫಲಿಸದಂತೆ ನೋಡಿಕೊಳ್ಳುವುದು ಎಲ್ಲಾ ಜಾತ್ಯತೀತವಾದಿಗಳ, ಪ್ರಜಾಪ್ರಭುತ್ವವಾದಿಗಳ ಜವಾಬ್ದಾರಿಯಾಗಿದೆ.

—ವೀಕೆ

ಶಿಕ್ಷಕರಿಗೆ ಬೆಂಬಲ

12-3-81ರಿಂದ ಸೆಕೆಂಡರಿ ಸ್ಕೂಲು ಶಿಕ್ಷಕರು ಪರೀಕ್ಷೆಗಳನ್ನು ಬಹಿಷ್ಕರಿಸಿ ಹೋರಾಟಕ್ಕಿಳಿದಿದ್ದಾರೆ. ಅನೇಕ ದಿನಗಳಿಂದ ಸರ್ಕಾರ ಕೊಡುತ್ತಿರುವ ಬೋಗಸ್ ಆಶ್ವಾಸನೆಗಳಿಂದ ಬೇಸತ್ತು ಹೋರಾಟದ ಹಾದಿಯಲ್ಲಿದ್ದಾರೆ.

ಎಸ್. ಎಫ್. ಐ.ನ ರಾಜ್ಯಸಮಿತಿ ಶಿಕ್ಷಕರ ಹೋರಾಟವನ್ನು ಸಂಪೂರ್ಣವಾಗಿ ಬೆಂಬಲಿಸಿದೆ. ಶಿಕ್ಷಕರ ನ್ಯಾಯಯುತ ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ. ಶಿಕ್ಷಕರನ್ನು ಬೆಂಬಲಿಸಿ ಸೌಹಾರ್ದ ಮತಪ್ರದರ್ಶನ ನಡೆಸಬೇಕೆಂದು ಎಸ್.ಎಫ್.ಐ. ಘಟಕಗಳಿಗೆ ರಾಜ್ಯ ಸಮಿತಿಯ ಪರವಾಗಿ ಉಪಾಧ್ಯಕ್ಷ ಕಾಂ. ಎನ್. ರಾಜಣ್ಣ ಕರೆಕೊಟ್ಟಿದ್ದಾರೆ.

●

ಸ್ವಾತಂತ್ರ್ಯ ದಿನದಂದೂ ಕೈದಿಯಾಗಿಯೇ ಉಳಿದೆ

(1ನೇ ಪುಟದಿಂದ)

ನನ್ನ ಯೌವ್ವನವನ್ನೆಲ್ಲಾ ಸವೆದು ಇಂದೂ ಕೂಡಾ ಜೈಲಿನಲ್ಲಿ ಮಲಗಿದ್ದೇನೋ, ಆ ಉದ್ದೇಶವು ಈಡೇರಿದ್ದಕ್ಕೆ ನನಗೆ ಸಂತೋಷವಾಯಿತು. ಆದರೆ ನಾನು ಇನ್ನೂ ಕೈದಿಯಾಗಿಯೇ ಇದ್ದೆ. ಭಾರತೀಯರಿಂದ, ಕಾಂಗ್ರೆಸ್ಸಿಗರಿಂದ ನಾನು ಜೈಲಿನಲ್ಲಿ ಇರುವಂತಾಗಿದೆ; ಬ್ರಿಟಿಷರಿಂದಲ್ಲ. 1927ರಿಂದೀಚಿನ ಘಟನಾವಳಿಗಳು ನನ್ನ ಕಣ್ಮುಂದೆ ತೇಲಿ ಹೋದವು. ಕೇರಳದ ಕಾಂಗ್ರೆಸ್ ಚಳುವಳಿಯಲ್ಲಿ ನಾನು ವಹಿಸಿದ ಪಾತ್ರವನ್ನು ನೆನೆದು ನಾನು ಹೆಮ್ಮೆ ಪಟ್ಟೆ. ಕೇರಳ ಪ್ರದೇಶ ಕಾಂಗ್ರೆಸ್ಸಿನ ಕಾರ್ಯದರ್ಶಿಯೂ, ಅಧ್ಯಕ್ಷನೂ, ದೀರ್ಘಕಾಲದ ತನಕ ಎ.ಐ.ಸಿ.ಸಿ. ಸದಸ್ಯನೂ ಆಗಿದ್ದ ವ್ಯಕ್ತಿಯೊಬ್ಬನು ಆಗಸ್ಟ್ 15ನ್ನು ಆಚರಿಸುತ್ತಿದ್ದುದು ಜೈಲಿನೊಳಗೆ! ಈ ಯೋಚನೆಗಳೊಂದಿಗೆ ನಾನು ಆ ಕೋಣೆಯಲ್ಲಿ ಶತಪಥ ತಿರುಗುತ್ತಿದ್ದೆ."

"ಯಾರೊಡನೆ ಮಾತನಾಡಲಿ? ನಿದ್ರೆ ಮಾಡದೆ ನನ್ನನ್ನು ಕಾವಲು ಕಾಯುತ್ತಿದ್ದ ವಾರ್ಡನ್‌ರೇ ಆ ವೇಳೆ ನನಗಿದ್ದ ಒಡನಾಡಿಗಳಾಗಿದ್ದರು. ನಾನು ಅವರೊಂದಿಗೆ ಮಾತನಾಡಿದೆ. ಆಗಸ್ಟ್ 15ರ ಮಹತ್ವವನ್ನು ವಿವರಿಸಿದೆ. ನಮ್ಮ ಸ್ವಂತ ಸರಕಾರ ಅಸ್ತಿತ್ವಕ್ಕೆ ಬಂದಿದೆ; ತಮಗೆ ಇನ್ನು ಮುಂದೆ ಹೆಚ್ಚು ಸಂಬಳ ಸಿಗಬಹುದೆಂದು ಅವರು ನಂಬಿದ್ದರು. ಪಾಪ! ಅವರು ತಪ್ಪುದಾರಿಗೆಳೆಯಲ್ಪಟ್ಟಿದ್ದರು".

"ನಾನು ಜೈಲಿನಲ್ಲೇ ಸ್ವಾತಂತ್ರ್ಯೋತ್ಸವ ಆಚರಿಸಬಯಸಿದೆ. ಅದಕ್ಕಾಗಿ ಮೊದಲೇ ಜೋಪಾನವಾಗಿಟ್ಟಿದ್ದ ರಾಷ್ಟ್ರಧ್ವಜವನ್ನು ಎತ್ತಿಹಿಡಿದು, ಆಗಸ್ಟ್ 15ರ ಮುಂಜಾನೆ ನಾನು ಜೈಲಿನ ಕೋಣೆಯಿಂದ ಹೊರಬಂದೆ. ಕೆಲವು ಕೈದಿಗಳು ನನ್ನನ್ನು ಹಿಂಬಾಲಿಸಿದರು. ಮೂರನೇ ಬ್ಲಾಕಿನ ಕೈದಿಗಳೆಲ್ಲ ಹೊರಬಂದರು! ಅಲ್ಲಿ ನಾನು ಧ್ವಜಾರೋಹಣ ಮಾಡಿದೆ.ನಾಲ್ಕೈದು ನಿಮಿಷ ಭಾಷಣ ಮಾಡಿದೆ. ಜೈಲು ಅಧಿಕಾರಿಗಳಿಗೆ ಇದು ಇಷ್ಟವಾಗಲಿಲ್ಲ. ಆದರೆ ಆದಿವಸ ಲಾಠೀಚಾರ್ಜು ಮಾಡಲು ಯಾಕೋ ಅವರಿಗೆ ಮನಸ್ಸಾಗಲಿಲ್ಲ. ಬ್ರಿಟಿಷ್ ಚಕ್ರವರ್ತಿಗಿದುರಾಗಿ ಜನತೆಯನ್ನು ಎತ್ತಿಕಟ್ಟಿದ್ದೇನೆಂಬ ಆರೋಪದ ಮೇಲೆ ಆಗಸ್ಟ್ 15ರ ನಂತರ ನನ್ನನ್ನು ಕಲ್ಲಿಕೋಟೆಯ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾಯಿತು. ಆಗಸ್ಟ್ 15ರಂದು ದೇಶವು ಸ್ವತಂತ್ರವಾಗಿತ್ತು. ಇದಾದ ನಂತರ, ಬ್ರಿಟಿಷರಿಂದ ರೂಪಿಸಲಾದ ಕ್ರಿಮಿನಲ್ ಕಾನೂನಿನ 124 ಎ. ಎಂಬ ವಿಧಿಗನುಸಾರವಾಗಿ, ರಾಜದ್ರೋಹದ ಆರೋಪದ ಮೇಲೆ ನನ್ನನ್ನು ಮ್ಯಾಜಿಸ್ಟ್ರೇಟರ ಬಳಿಗೆ ಕೊಂಡುಹೋಗುತ್ತಿದ್ದರು! ಜನತೆಗೆ ವಿಸ್ಮಯವಾಯಿತು. ಇದು ಯಾವ ರೀತಿಯ ಸರಕಾರ?"

ನ್ಯಾಯಾಲಯದಲ್ಲಿ ನಾನು ಈ ಕೆಳಗಿನ ಹೇಳಿಕೆ ನೀಡಿದೆ: "ಬ್ರಿಟಿಷ್ ಇಂಡಿಯಾದ ಚಕ್ರವರ್ತಿಗಿದುರಾಗಿ ದ್ವೇಷವನ್ನು ಬೆಳೆಸಿದ್ದೇನೆನ್ನಲು ನಾನು ಹೆಮ್ಮೆ ಪಡುತ್ತೇನೆ. ಈ ದೇಶದ ಎಲ್ಲಾ ಸ್ವಾತಂತ್ರ್ಯ ಪ್ರೇಮಿಗಳು ಸ್ವಾತಂತ್ರ್ಯ ಹೋರಾಟವು ಆರಂಭವಾದಂದಿನಿಂದಲೂ ಅದರ ಮುಖಂಡರಾಗಿರುವ ನೆಹರೂ, ಮಹಾತ್ಮಾ ಗಾಂಧೀ ಮೊದಲಾದವರು ಚಕ್ರವರ್ತಿ ಸರಕಾರಕ್ಕಿದುರಾಗಿ ವೈಷಮ್ಯವನ್ನು ಬೆಳೆಸಲು ಶ್ರಮವಹಿಸಿದ್ದಾರೆ. ಇದೇ ಕಾರಣಕ್ಕಾಗಿ, ಹಿಂದೆ ಮಹಾತ್ಮ ಗಾಂಧೀ ವಿರುದ್ಧ ಭಾರತೀಯ ದಂಡ ಸಂಹಿತೆಯ 124 (ಎ) ನಿಬಂಧನೆಯ ಪ್ರಕಾರ ವಿಚಾರಣೆ ನಡೆದಿದೆ. ಇವೆಲ್ಲದರ ಫಲವಾಗಿ ಚಕ್ರವರ್ತಿಯ ಸರಕಾರವೂ, ಬ್ರಿಟಿಷ್ ಇಂಡಿಯಾವೂ ಇಂದು ಕೊನೆಗೊಂಡಿದೆ. ನನ್ನೊಂದಿಗೆ ಇವೇ ಅಪರಾಧಗಳಲ್ಲಿ ಭಾಗಿಗಳಾಗಿದ್ದ ಒಡನಾಡಿಗಳಲ್ಲಿ ಹಲವರು ಇಂದು ಮಂತ್ರಿಗಳೂ, ರಾಜ್ಯಪಾಲರೂ ಆಗಿರುತ್ತಾರೆ. ಆಗಸ್ಟ್ 15ರಂದು ಸ್ವಾತಂತ್ರ್ಯಗಳಿಸಿದ್ದೇವೆಂದು ಪರಿಗಣಿತವಾಗಿರುವ ಈ ಸಂದರ್ಭದಲ್ಲಿ ನನ್ನನ್ನು ಇಲ್ಲಿಗೆ ವಿಚಾರಣೆಗೆ ತಂದಿರುವುದು ವಿಚಿತ್ರ. ನನಗಿದರಿಂದ ಖೇದವಾಗಿದೆ."

"ಕಾಂಗ್ರೆಸ್ಸಿಗನಾದ ಕೆ. ಪಿ. ರಾಮುಣ್ಣಿ ಮೆನೋನ್ ಸರಕಾರಿ ವಕೀಲರಾಗಿದ್ದರು".

[ಕಾಂ. ಬಿ. ಮಾಧವ್‌ರು ಅನುವಾದಿಸಿರುವ "ಎ. ಕೆ. ಜಿ. ಆತ್ಮವೃತ್ತಾಂತ"ದಿಂದ ಆಯ್ದುದು].

○

ಕಾಂ. ನಾಗೇಶ್‌ರಾಯರ ನಿಧನ

ಕಮ್ಯೂನಿಸ್ಟ್ ಚಳುವಳಿಯಲ್ಲಿ ಮೊದಲಿನಿಂದಲೂ ಸಕ್ರಿಯ ಪಾತ್ರ ವಹಿಸುತ್ತಿದ್ದ ಕಾಂ. ಎ. ನಾಗೇಶ್‌ರಾಯರು ಬೆಂಗಳೂರಿನಲ್ಲಿ 18-3-81ರಂದು ಹೃದಯಾಘಾತದಿಂದ ನಿಧನರಾಗಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೂ ಕಮ್ಯೂನಿಸ್ಟ್ ಚಳುವಳಿಯಲ್ಲಿ ಪಾಲ್ಗೊಂಡಿದ್ದು, ಟ್ರೇಡ್ ಯೂನಿಯನ್ ಮುಖಂಡರಾಗಿ, ಕಾರ್ಪೋರೇಟರ್ ಆಗಿ ಕಾರ್ಯನಿರ್ವಹಿಸಿದ್ದರು. 1964ರಲ್ಲಿ ಪಾರ್ಟಿ ಇಬ್ಭಾಗವಾದಾಗ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜೊತೆ ನಿಂತು ಜೈಲುವಾಸವನ್ನೂ ಅನುಭವಿಸಿದರು.

ಕಾಂ. ಎ. ನಾಗೇಶ್‌ರಾಯರ ನಿಧನದಿಂದಾಗಿ ಪುರೋಗಾಮಿ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ಕಾಂ. ಎ. ನಾಗೇಶ್‌ರಾಯರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪರವಾಗಿ ಕಾಂ. ಎಸ್. ಎಲ್. ಉಪಾಧ್ಯಾಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ವ್ಯಾಪಕಗೊಳ್ಳುತ್ತಿರುವ ಹಿಂಸಾಚಾರ

[1ನೇ ಪುಟದಿಂದ]

ಶಾಸನ ಸಭೆಗಳಲ್ಲಿ ವಿರೋಧ ಪಕ್ಷಗಳ ನಾಯಕರು ವಿವಂಚನೆ ವ್ಯಕ್ತಪಡಿಸಿದರೆ ಕಾನೂನು-ಸುರಕ್ಷಣೆ ಹೊಣೆಹೊತ್ತಿರುವ ಮುಖ್ಯಮಂತ್ರಿ ಹಗೇರಾಗಿ ಮಾತನಾಡಿದ್ದಾರೆ.

ಹೋರಾಟಗಳು ಬೆಳೆದುಬರುತ್ತಿರುವಾಗ ತಮ್ಮ ಅಸ್ತಿತ್ವಕ್ಕಾಗಿ ಪಟ್ಟಭದ್ರ ಶಕ್ತಿಗಳು ಹಿಂಸಾಚಾರ ನಡೆಸುವುದು ಹೊಸದೇನಲ್ಲ. ಗೂಂಡಾಗಿರಿಯನ್ನು ತಡೆಯಲು ಬಲಿಷ್ಠ ಸಂಘಟನೆ ಕಟ್ಟುವುದೊಂದೇ ಮಾರ್ಗ. ಚಾಕು-ಚೂರಿಗಳಿಂದ ಜನತೆಯ ಹೋರಾಟಗಳನ್ನು ದಮನಗೊಳಿಸುವುದು ಸಾಧ್ಯವೆಂದು ಖಾನ್-ಹರಿಪ್ರಸಾದ್-ಜಾರ್ಜರು ಭಾವಿಸಿದ್ದರೆ ಅವರು ಮೂರ್ಖರಷ್ಟೇ.

ಬೆಂಗಳೂರು ನಗರ ಕಾವೇರಿದೆ. ಈ ಮಾಫಿಯಾ ತಂಡದ ಕೃತ್ಯಗಳಿಂದ ಜನತೆ ಭೀತವಾಗಿದೆ. ಪೋಲೀಸ್ ಪಡೆ ನಿಷ್ಕ್ರಿಯವಾಗಿದೆ. ಜನರನ್ನು ಸಾಗಿಸಬೇಕಾಗಿರುವ ಸಾರಿಗೆ ಬಸ್ಸುಗಳು ನಗರದ ಅನೇಕಕಡೆ ಬಿ.ಎಸ್.ಎಫ್. ಮೊದಲಾದ ಪೋಲೀಸ್ ಪಡೆಗಳನ್ನು ತುಂಬಿಕೊಂಡು ನಿಂತಿರುವುದು ಗೋಚರಿಸುತ್ತಿದೆ.

ಸಹನೆಯ ಕಟ್ಟೆ ಒಡೆಯುವ ಮೊದಲೇ ಪಾತಕಿಗಳು ಎಚ್ಚೆತ್ತರೆ ಒಳ್ಳೆಯದು.

●

ಚಂದಾ ವಿವರ

ವಾರ್ಷಿಕ ಚಂದಾ	: 25ರೂ.
6 ತಿಂಗಳಿಗೆ	: 13ರೂ.
ಬಿಡಿ ಪ್ರತಿ	: 50 ಪೈಸೆ

ಮಾರ್ಚ್ 26ರಂದು ಪಾರ್ಲಿಮೆಂಟ್ ಚಲೋ

ಮಾರ್ಚ್ 26ರಂದು ದೇಶದ ಮೂಲೆಮೂಲೆಗಳಿಂದ ರೈತರು, ಕೃಷಿ ಕೂಲಿಕಾರರು, ಬಳಕೆದಾರರು ಮೊದಲಾದವರು ತಮ್ಮ ಬೇಡಿಕೆಗಳಿಗೋಸ್ಕರ ಒತ್ತಾಯಿಸಿ ದೆಹಲಿಯಲ್ಲಿ ಸಮಾವೇಶಗೊಳ್ಳಲಿದ್ದಾರೆ. ಸೆಂಟ್ರಲ್ ಕಿಸಾನ್ ಕೋ ಆರ್ಡಿನೇಷನ್ ಕಮಿಟಿಯ ಆಶ್ರಯದಲ್ಲಿ ನಡೆಯಲಿರುವ ಈ ಬೃಹತ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅಖಿಲಭಾರತ ಕಿಸಾನ್‌ಸಭಾ(ಎಐಕೆಎಸ್)ದ ಪ್ರಧಾನ ಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ಟರ್ (ಎಂ.ಪಿ.) ಕರೆಕೊಟ್ಟಿದ್ದಾರೆ.

ಲಾಠೀ, ಗುಂಡುಗಳನ್ನೆದುರಿಸಿ ದೇಶದ ಕೆಲವೆಡೆ ರೈತರು ಕೆಲವು ಬೇಡಿಕೆಗಳನ್ನು ಈಡೇರಿಸಿಕೊಂಡಿದ್ದರೂ ತಾತ್ಕಾಲಿಕ ಪರಿಹಾರ ಮಾತ್ರ ದೊರೆತಿದೆ. ಖಾಯಂ ಪರಿಹಾರಕ್ಕಾಗಿ ಹೋರಾಟ ನಡೆಯುತ್ತಿದೆ. 12 ಅಂಶಗಳ ಬೇಡಿಕೆಗಳನ್ನು ಮುಂದಿಟ್ಟು ಪಾರ್ಲಿಮೆಂಟ್ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ರೈತರ ಕೃಷಿಕೂಲಿಕಾರರ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸುವ ಬದಲು ತಾನೂ ರೈತರ ರ್‍ಯಾಲಿ ಏರ್ಪಡಿಸಿ ಇಂದಿರಾ ನೇತೃತ್ವದ ಕಾಂಗ್ರೆ ತಿಪ್ಪರಲಾಗ ಹಾಕುತ್ತಿದೆ. ಕಳೆದ ತಿಂಗಳು ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಕಿಸಾನ್ ರ್‍ಯಾಲಿಗೋಸ್ಕರ ಕೋಟ್ಯಾಂತರ ರೂ. ಹಣವನ್ನು ಖರ್ಚುಮಾಡಿದ್ದಲ್ಲದೇ ಸರಕಾರಿ ಯಂತ್ರವನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಯಿತು.

ದೇಶದ ವಿವಿಧ ಭಾಗಗಳಲ್ಲಿ ಹೋರಾಟ ನಡೆಸುತ್ತಿದ್ದ ರೈತ-ಕೃಷಿ ಕೂಲಿಕಾರ ಬಾಂಧವರ ಮೇಲೆ ಗುಂಡಿನ ಮಳೆಸುರಿಸಿ ಬಲಿತೆಗೆದುಕೊಳ್ಳಲಾಗಿದೆ. ಬೇಡಿಕೆಗಳಿಗೆ ಧ್ವನಿಯೆತ್ತಿದರೆ ಕೊರಳನ್ನೇ ಕೊಯ್ಯುವ ಕೆಲಸ ನಡೆಯುತ್ತಿದೆ. ಜನವಿರೋಧಿ ಸರಕಾರದ ವಿರುದ್ಧ ಸಂಘಟಿತ ಹೋರಾಟವೊಂದೇ ಉಳಿದಿರುವ ಮಾರ್ಗ.

26ರಂದು ನಡೆಯಲಿರುವ ಐತಿಹಾಸಿಕ ಕಾರ್ಯಕ್ರಮದಲ್ಲಿ ಎ.ಐ.ಕೆ.ಎಸ್.ನ ಎಲ್ಲಘಟಕಗಳೂ ಪಾಲ್ಗೊಂಡು ರ್‍ಯಾಲಿಗೆ ರೈತ ಕೂಲಿಕಾರರನ್ನು ಬೃಹತ್ ಪ್ರಮಾಣದಲ್ಲಿ ಸಂಘಟಿಸಬೇಕೆಂದು ಕಾಂ. ಚಾತುನ್ನಿ ಮಾಸ್ಟರ್ ಕೋರಿದ್ದಾರೆ.

ಪಾರ್ಲಿಮೆಂಟ್ ಚಲೋ ಕಾರ್ಯಕ್ರಮಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ರೈತ-ಕೂಲಿಕಾರರು ತೆರಳಲಿದ್ದಾರೆ.

●

ಎಸ್. ಎಫ್. ಐ. ಬೆಂಬಲ

ಮಾರ್ಚ್ 28ರಂದು ಬೆಂಗಳೂರಿನಲ್ಲಿ ಡಿ.ವೈ.ಓ. ನೇತೃತ್ವದಲ್ಲಿ ನಡೆಯಲಿರುವ "ನಿರುದ್ಯೋಗ ವಿರೋಧಿ" ದಿನಾಚರಣೆಗೆ ಎಸ್.ಎಫ್.ಐ. ತನ್ನ ಬೆಂಬಲ ಸೂಚಿಸಿದೆ.

ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ಕಾಂ. ಎಸ್.ಆರ್. ಆರಾಧ್ಯ ಕರೆಕೊಟ್ಟಿದ್ದಾರೆ.

●

ಡಿ.ವೈ.ಓ. ಜಿಲ್ಲಾ ಸಂಘಟನಾ ಸಮಿತಿ

9-3-81ರಂದು ಶಿವಮೊಗ್ಗೆಯಲ್ಲಿ ಡಾ|| ಕೃಷ್ಣಾಜಿಯವರ ಅಧ್ಯಕ್ಷತೆಯಲ್ಲಿ ಡಿ.ವೈ.ಓ. ಸಭೆ ಸೇರಿತ್ತು. ಡಿ.ವೈ.ಓ. ರಾಜ್ಯ ಸಂಚಾಲಕ ಕಾಂ. ಜಿ. ವಿ. ಶ್ರೀರಾಮರೆಡ್ಡಿಯವರು ಪಾಲ್ಗೊಂಡಿದ್ದರು.

ಯುವಜನ ಸಂಘಟನೆಯ ಕಾರ್ಯಕ್ರಮ, ಉದ್ದೇಶ, ಹೋರಾಟದ ಹಿನ್ನೆಲೆ ಕುರಿತು ಕಾಂ. ಶ್ರೀರಾಮರೆಡ್ಡಿ ವಿವರಿಸಿದರು. ನಂತರ ಹೊಸದಾಗಿ ಜಿಲ್ಲಾ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಕಾಂ.ಆರ್. ಗೋಪಾಲನಾಯಕರನ್ನು ಜಿಲ್ಲಾ ಸಂಚಾಲಕರನ್ನಾಗಿ ಆಯ್ಕೆಮಾಡಲಾಯಿತು.

ಸಭೆಯಲ್ಲಿ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ವರದಿಗಾರ ಶ್ರೀ ಜಿ.ಪಿ. ಬಸವರಾಜ್ ಅವರಿಗೆ ಬಿಜೆಪಿಯ ಕಾರ್ಯಕರ್ತ ನಾರಾಯಣಸ್ವಾಮಿ ಎಂಬುವರು ಬೆದರಿಕೆ ಹಾಕಿದ್ದನ್ನು ಉಗ್ರವಾಗಿ ಖಂಡಿಸಲಾಯಿತು. ಪ್ರಗತಿಪರ ದಿಟ್ಟಧೋರಣೆಯುಳ್ಳ ಈ ಪತ್ರಿಕಾ ವರದಿಗಾರರ ಮೇಲೆ ದಾಳಿ ಮಾಡಲೆತ್ನಿಸಿರುವುದನ್ನು ಎಲ್ಲ ಪ್ರಗತಿಪರ ಸಂಘಸಂಸ್ಥೆಗಳು ಖಂಡಿಸಬೇಕೆಂದು ಕೋರಲಾಯಿತು. ●

ಕಾರ್ಮಿಕರ ಕಟ್ಟಡಕ್ಕೆ ಬಸು ಅವರಿಂದ ಅಸ್ತಿಭಾರ

ಹರಿಹರದಲ್ಲಿನ 'ದಿ ಮೈಸೂರ್ ಕಿರ್ಲೋಸ್ಕರ್ ಎಂಪ್ಲಾಯೀಸ್ ಯೂನಿಯನ್' ಸದಸ್ಯರು ಸುಮಾರು 1 ಲಕ್ಷ ರೂಗಳ ವೆಚ್ಚದಲ್ಲಿ ತಮ್ಮದೇ ಆದ ಕಛೇರಿಯ ಕಟ್ಟಡವನ್ನು ನಿರ್ಮಿಸಲಿದ್ದು ಅದಕ್ಕೆ ಅಸ್ತಿಭಾರವನ್ನು ಸಿ.ಐ.ಟಿ.ಯು. ಉಪಾಧ್ಯಕ್ಷ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಅವರು ಮಾರ್ಚ್ 8ರಂದು ಹಾಕಿದರು.

○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053. Editorial and managerial office : L-56, K. V. Temple Street, Sultanpet, Bangalore-560 053. Phone : 24434

EDITOR : M. K. BHAT